# ಶ್ರೀ ರಾಮಕೃಷ್ಣರ ತೀರ್ಥಯಾತ್ರೆ

ಬ್ರಹ್ಮಚಾರಿ ನರೇಶಚೈತನ್ಯ

ಭಗವಂತನ ಅವತಾರವಾದ ಶ್ರೀರಾಮಕೃಷ್ಣರು ಭೇಟಿಕೊಟ್ಟ ಪ್ರತಿಯೊಂದು ಸ್ಥಳವೂ ಪುಣ್ಯಕ್ಷೇತ್ರವಾಗಿದೆ. ಆದರೆ ಅವರು ತೀರ್ಥ ಯಾತ್ರೆ ಮಾಡಿದ ಕಥೆಯೂ ಅವರ ಜೀವನದಲ್ಲಿ ಕಂಡುಬರುತ್ತದೆ. ಈ ಯಾತ್ರೆಯ ವಿವರಗಳೇನು? – ಈ ಬಗ್ಗೆ ಇಲ್ಲಿ ಬರೆದಿರುವ ಲೇಖಕರು ಮಾದಿಹಳ್ಳಿ ರಾಮಕೃಷ್ಣ ಮಿಷನ್ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ತೀರ್ಥ ಎಂದರೆ ಪವಿತ್ರ ಸ್ಥಳ ಅಥವಾ ಪುಣ್ಯಕ್ಷೇತ್ರ. ತೀರ್ಥಕ್ಕೆ ಭಗವಂತನ ಚರಣಾಮೃತ ಅಥವಾ ಅಭಿಷೇಕದ ಜಲವೆಂದು ಅರ್ಥ. ಪುಣ್ಯಮಯ ಜಲಕ್ಕೂ ತೀರ್ಥವೆಂದು ಹೆಸರು. ಶ್ರೀಮದ್ ಭಾಗವತದಲ್ಲಿ ಯುಧಿಷ್ಠಿರನು ವಿದುರರಿಗೆ ಹೀಗೆ ಹೇಳುತ್ತಾನೆ –

**ಭವದ್ವಿಧಾ ಭಗವತಾಸ್ತೀರ್ಥೀ ಭೂತಾಃ ಸ್ವಯಂ ವಿಭೋಃ ।**
**ತೀರ್ಥೀಕುರ್ವಂತಿ ತೀರ್ಥಾನಿ ಸ್ವಾಂತಃಸ್ಥೇನ ಗದಾಭೃತಾ ॥**


ಭಾರತದಾದ್ಯಂತ ಪುಣ್ಯ ಕ್ಷೇತ್ರಗಳು, ಮಹಾತೀರ್ಥಗಳು ಎಲ್ಲೆಡೆ ಹರಡಿಕೊಂಡಿವೆ. ಪವಿತ್ರ ಭರತಭೂಮಿಯು ತನ್ನ ಮಡಿಲಲ್ಲಿ ದ್ವಾದಶ ಜ್ಯೋತಿರ್ಲಿಂಗಗಳನ್ನು, ಐವತ್ತೊಂದು ಶಕ್ತಿ ಪೀಠಗಳನ್ನು, ನೂರೆಂಟು ದಿವ್ಯ ದೇಶಗಳನ್ನು, ಅನೇಕಾನೇಕ ಸಿದ್ಧ ಮತ್ತು ಜಾಗೃತ ದೇವತಾ ಸ್ಥಾನಗಳನ್ನು, ಪವಿತ್ರ ನದಿಗಳನ್ನು ಇತ್ಯಾದಿಯಾಗಿ ದಿವ್ಯ ಮತ್ತು ಪರಮ ಮಂಗಲಕರವಾದ ಕ್ಷೇತ್ರಗಳನ್ನು ತನ್ನ ಮಡಿಲಿನಲ್ಲಿ ಹುದುಗಿಸಿಟ್ಟುಕೊಂಡಿದೆ. ಹಾಗೆ ನೋಡಿದಾಗ ಇಡೀ ಭರತಭೂಮಿಯೇ ಒಂದು ಪವಿತ್ರಭೂಮಿ. ಇಲ್ಲಿನ ನೆಲ,ಜಲ, ಗಾಳಿ, ಎಲ್ಲವೂ ತೀರ್ಥವೇ. ಆದರೆ ಭಗವಂತನ ವಿಶೇಷ ಆವಿರ್ಭಾವದ ಜಾಗೃತಸ್ಥಳಗಳು ಮಹಾತೀರ್ಥಕ್ಷೇತ್ರಗಳು ಎಂದು ಪರಿಗಣಿಸಲ್ಪಟ್ಟಿವೆ. ಶ್ರೀ ಗುರು ಮಹಾರಾಜರು ಸ್ವಯಂ ಅವತಾರವರಿಷ್ಠರು, ಅವರಿಗೆ ತೀರ್ಥಾಟನೆಯ ಆವಶ್ಯಕತೆ ಇರಲಿಲ್ಲ. ಆದರೆ ಈ ಬಾರಿಯ ಅವತಾರವು ಭಕ್ತಾವತಾರ. ಆದ್ದರಿಂದ ಲೋಕದ ಹಿತ ಮತ್ತು ಜಗತ್‌ಶಿಕ್ಷಣಕ್ಕಾಗಿ ಅವರೂ ತೀರ್ಥಯಾತ್ರೆಯನ್ನು ಕೈಗೊಂಡರು. ತನ್ಮೂಲಕ ಆಯಾ ಕ್ಷೇತ್ರಗಳನ್ನು ಇನ್ನೂ ಪವಿತ್ರವೂ, ಜಾಗೃತವೂ ಆಗಿಸಿದರು.

ಶ್ರೀರಾಮಕೃಷ್ಣರು ತೀರ್ಥದ ವಿಚಾರದಲ್ಲಿ ಈ ಎರಡು ವಿಷಯಗಳನ್ನು ಒತ್ತಿ ಹೇಳುತ್ತಿದ್ದರು–

* ತೀರ್ಥಕ್ಷೇತ್ರ ಸಂದರ್ಶನಕ್ಕೂ ಮುನ್ನವೇ ತೀರ್ಥಿಯು ಆಯಾ ಕ್ಷೇತ್ರದ ಮಾಹಾತ್ಮ್ಯೆಯನ್ನು ಭಕ್ತಿಯಿಂದ ಭಾವಿಸದಿದ್ದರೆ ಹೆಚ್ಚಿನ ಪ್ರಯೋಜನವನ್ನು ಪಡೆಯಲಾಗುವುದಿಲ್ಲ.
* ತೀರ್ಥಕ್ಷೇತ್ರಗಳನ್ನು ಮತ್ತು ಪುಣ್ಯಸ್ಥಾನಗಳನ್ನು ದರ್ಶಿಸಿದ ನಂತರ, ಆಯಾ ಕ್ಷೇತ್ರಗಳ ಪವಿತ್ರ ಉನ್ನತ ಭಾವನೆಗಳಲ್ಲಿ ಒಬ್ಬನು ತನ್ನ ಮನಸ್ಸನ್ನು ವ್ಯಸ್ತವಾಗಿಸಬೇಕು.

ಒಬ್ಬ ವ್ಯಕ್ತಿಯ ತೀರ್ಥಯಾತ್ರೆ ಯಶಸ್ವಿಯಾಗುವುದು ಅವನು ಮಾಡಿದ ತೀರ್ಥಾಟನೆಯಿಂದ ಅವನಿಗೆ ಭಗವತ್‌ಪ್ರೇಮ ಉಂಟಾಗಲು ಅದು ಸಹಾಯ ಮಾಡಿದಾಗ ಮಾತ್ರ .

ಹಾಗೆ ನೋಡಿದಲ್ಲಿ ಈ ಎರಡೂ ವಿಷಯಗಳನ್ನು ಅವರು ಅಕ್ಷರಶಃ ಪಾಲಿಸಿದರು. ಶ್ರೀರಾಮಕೃಷ್ಣರು ಮಾಡಿದ ತೀರ್ಥ ಯಾತ್ರೆ ಮತ್ತು ಅಲ್ಲಿ ಆದ ಅಪೂರ್ವ ಅನುಭವ, ದರ್ಶನಗಳನ್ನು ಈ ಲೇಖನವು ಒಳಗೊಂಡಿದೆ.



## ಶ್ರೀ ಗುರುಮಹಾರಾಜರ ಕಾಶೀಯಾತ್ರೆ

ಶ್ರೀರಾಮಕೃಷ್ಣರ ಭಕ್ತ, ರಾಣಿ ರಾಸಮಣಿಯ ಅಳಿಯ ಮಥುರನಾಥ ವಿಶ್ವಾಸ ಮತ್ತು ಅವನ ಹೆಂಡತಿ ಜಗದಂಬಾ ಶ್ರೀರಾಮಕೃಷ್ಣರನ್ನು ತಮ್ಮೊಡನೆ ಕಾಶೀಯಾತ್ರೆಗೆ ಬರಲು ವಿಜ್ಞಾಪಿಸಿದರು. ಮಥುರನ ಆಶ್ಚರ್ಯಕ್ಕೆ ಶ್ರೀರಾಮಕೃಷ್ಣರೂ ಒಪ್ಪಿದರು. ತದನಂತರ ಕಾಶೀಯಾತ್ರೆಗಾಗಿ ಮಥುರನಿಂದ ಅದ್ದೂರಿ ಸಿದ್ಧತೆಗಳು ನಡೆದವು. ರಾಜೋಪಮವಾದ ರೀತಿಯಲ್ಲಿ ಅಂದಿನ ಕಾಲಕ್ಕೆ ಬರೋಬ್ಬರಿ ಒಂದು ಲಕ್ಷರೂಪಾಯಿಗಳಷ್ಟು ಖರ್ಚು ಮಾಡಿದನು. ಶ್ರೀರಾಮಕೃಷ್ಣರು, ಹೃದಯರಾಮ, ತಾನೂ ತನ್ನ ಪತ್ನಿ ಕುಟುಂಬ

ಸ್ಥರು, ಬಾಣಸಿಗರು, ಅರ್ಚಕರು, ಗಾಯಕರು, ಆಳು-ಕಾಳು, ಪರಿಚಾರಕರು ಸೇರಿ ನೂರಕ್ಕೂ ಹೆಚ್ಚು ಜನರೊಂದಿಗೆ ಈ ತೀರ್ಥ ಯಾತ್ರೆ ನಡೆಯಿತು. ೧೮೬೮ರ ೨೭ನೇ ಜನವರಿ, ಸೋಮವಾರ ದಂದು ಹೌರಾ ರೈಲ್ವೇ ನಿಲ್ದಾಣದಿಂದ ಈ ಯಾತ್ರೆ ಪ್ರಾರಂಭ ವಾಯಿತು.

### ಮಾರ್ಗಮಧ್ಯದಲ್ಲಿ ಶ್ರೀವೈದ್ಯನಾಥ ದರ್ಶನ

ಕಾಶಿಯಾತ್ರೆಯ ಮಾರ್ಗಮಧ್ಯದಲ್ಲಿ ಶ್ರೀರಾಮಕೃಷ್ಣರು ಇಂದಿನ ದೇವಘರ್ ನಲ್ಲಿ ಇರುವ ಶ್ರೀ ವೈದ್ಯನಾಥನ ದರ್ಶನ ಮಾಡ ಹೊರ ಟರು. ಇದು ಒಂದು ಪ್ರಮುಖ ವಿಚಾರ. ಕಾರಣ ರೋಮಾ ರೋಲಾ ಹೇಳುವಂತೆ ಇಲ್ಲಿಯೇ ಶ್ರೀರಾಮಕೃಷ್ಣರು ಮನುಷ್ಯರ ಅಸಹಾಯಕ ಬಳಲಿಕೆಯನ್ನು ಕಂಡುಕೊಂಡಿದ್ದು. ಶ್ರೀರಾಮ ಕೃಷ್ಣರು ಮತ್ತು ಇತರ ಯಾತ್ರಾರ್ಥಿಗಳು ವೈದ್ಯನಾಥ ಧಾಮಕ್ಕೆ ಬಂದಾಗ ಸುತ್ತೆಲ್ಲಾ ಭೀಕರ ಬರಗಾಲವಿತ್ತು. ಮಾರ್ಗಮಧ್ಯದಲ್ಲಿ ಚುರುಲಿಯಾ ಎಂಬ ಗ್ರಾಮದಲ್ಲಿ ಬರದಿಂದ ಬಳಲಿ ಬಾಡಿ ಹೋದ ಜನರ ಸಮೂಹವನ್ನು ಕಂಡಾಗ ಶ್ರೀರಾಮಕೃಷ್ಣರಿಗೆ ಹೃದಯ ಹಿಂಡಿದಂತಾಯಿತು. ದುಃಖಿತರಾಗಿ ಮಥುರನಿಗೆ, ''ನೀನು ಜಗನ್ಮಾತೆಯ ಎಸ್ಟೇಟಿನ ಮ್ಯಾನೇಜರ್ ಮಾತ್ರ. ಈ ಜನ ರಿಗೆ ತಲೆ ತಂಪಾಗಲು ಎಣ್ಣೆ, ಒಂದು ಬಟ್ಟೆ, ಮತ್ತು ಹೊಟ್ಟೆ ತುಂಬಾ ಊಟ, ಕೊಡು'' ಎಂದರು. ಮಥುರನಿಗೆ ಮನಸ್ಸಿಲ್ಲದೆ ತನ್ನ ಹತ್ತಿರ ಈ ಜನರ ದುಃಖ ದೂರ ಮಾಡುವಷ್ಟು ಸಾಮಗ್ರಿ ಈಗ ಇಲ್ಲ ವೆಂದನು. ಆದರೆ ಶ್ರೀರಾಮಕೃಷ್ಣರು ಬಿಡಲಿಲ್ಲ, ಪರಮಕಾರುಣ್ಯದ ಪುಣ್ಯಮೂರ್ತಿಯೇ ಆದ ಅವರು ಧಾರಾಕಾರವಾಗಿ ಕಣ್ಣೀರು ಸುರಿಸುತ್ತಾ, ಆ ದುಃಖಿತ ಜನರೊಡನೆ ತಾವೂ ಧೂಳಿನಲ್ಲಿ ಹಟ ಹಿಡಿದು ಕುಳಿತುಕೊಂಡರು. ''ಥೂ ದರಿದ್ರನೆ! ನಾನು ಕಾಶಿಗೆ ಇನ್ನು ಬರುವುದಿಲ್ಲ. ಇಲ್ಲೇ ಇವರೊಂದಿಗೆ ನಾನು ಇದ್ದುಬಿಡುವೆನು. ಈ ಜನರಿಗೆ ತನ್ನವರು ಎನ್ನುವವರು ಯಾರೂ ಇಲ್ಲ. ಇವರನ್ನು ಬಿಟ್ಟು ನಾನು ಬರುವುದಿಲ್ಲ. ನೀನು ಹೋಗಬಹುದು'' ಎಂದು ಖಡಾ ಖಂಡಿತವಾಗಿ ತಮ್ಮ ಶಿಶು ಸಹಜ ಸ್ವಭಾವದಲ್ಲಿ ಹೇಳಿಯೇಬಿಟ್ಟರು. ಮಥುರನು ನಡುಗಿಹೋದನು. ಅವನ ಪ್ರೀತಿಯ 'ಬಾಬಾ' ಶ್ರೀಠಾಕೂರರ ಈ ಧರಣಿಗೆ ಅವನು ಮಣಿಯಲೇಬೇಕಾಯಿತು. ಕಲ್ಕತ್ತೆಯಿಂದ ತಾನು ತಂದಿದ್ದ ಉಗ್ರಾಣದಿಂದ ಆ ಜನರಿಗೆ ಊಟ, ಬಟ್ಟೆ ಮತ್ತು ತಲೆಗೆ ಎಣ್ಣೆಯನ್ನು ಕೊಟ್ಟನು. ಪ್ರತಿ ಜೀವಿಗಳಲ್ಲಿ ಶಿವನನ್ನು ಕಂಡು ಆರಾಧಿಸುತ್ತಿದ್ದ ಶ್ರೀರಾಮಕೃಷ್ಣರು ಇದರಿಂದ ಸಂತೃಪ್ತರಾದರು. ನಂತರ ಸಂತೋಷದಿಂದ ಶ್ರೀವೈದ್ಯನಾಥ ದೇಗು ಲಕ್ಕೆ ತೆರಳಿದರು. ಶ್ರೀ ವೈದ್ಯನಾಥ ಶಿವಲಿಂಗದ ದರ್ಶನದಿಂದ ಶ್ರೀರಾಮಕೃಷ್ಣರು ಆಳವಾದ ಸಮಾಧಿಯಲ್ಲಿ ಮುಳುಗಿಹೋದರು. ಇದೇ ಕ್ಷೇತ್ರದಲ್ಲಿ ಶ್ರೀರಾಮಕೃಷ್ಣರ ಆಣತಿಯಂತೆ, ಮಥುರನು ಬ್ರಾಹ್ಮಣರಿಗೆ ದಕ್ಷಿಣೆ ಮತ್ತು ಬಡವರಿಗೆ ದಾನಗಳನ್ನು ಕೊಟ್ಟನು.

### ಕಾಶಿಯೆಡೆಗೆ

ಅಲ್ಲಿಂದ ಕಾಶಿಯೆಡೆಗೆ ಹೊರಟ ತೀರ್ಥಾರ್ಥಿಗಳ ಪಡೆ, ಮೊಘಲ್ ಸರಾಯ್ ಎಂಬ ನಿಲ್ದಾಣದಲ್ಲಿ ಇಳಿದು, ಮುಂದೆ ಕಾಶಿ ಯೆಡೆಗೆ ಪ್ರಯಾಣ ಬೆಳೆಸಿತು. ಕಾಶಿ-ಭಾರತದ ಸಪ್ತ ಪುರಾತನ ನಗರಗಳಲ್ಲಿ ಒಂದು. ಕಾಶಿ-ಪರಶಿವನ ತ್ರಿಶೂಲದ ಮೇಲೆ ನಿಂತಿ ರುವ ಪ್ರಪಂಚಾತೀತ ನಗರ. ಕಾಶಿ-ಜಗತ್ತಿನ ಮಹಾಸ್ಮಶಾನ - ಪ್ರತಿಯೊಬ್ಬ ಸನಾತನಿಯು ತನ್ನ ಅಂತಿಮ ಉಸಿರು ತ್ಯಜಿಸಲು ಆಶಿಸುವ ಪುಣ್ಯ ರುದ್ರ ಭೂಮಿ. ಅನೇಕ ಸ್ನಾನ ಘಟ್ಟಗಳು, ಸಾವಿ ರಾರು ಮೆಟ್ಟಿಲ ಸಾಲುಗಳು, ಗಂಭೀರವಾಗಿ ಹರಿಯುವ ಬ್ರಹ್ಮ ವಾರಿ ಭಾಗೀರಥೀ, ಪುರಾಣಪ್ರಸಿದ್ಧವಾದ ಅಸಂಖ್ಯ ಮಂದಿರ ಮಂಟಪ ಗಳು, ಮಠ-ಪೀಠಗಳು, ಧರ್ಮಶಾಲೆಗಳು, ಸಾವಿರಾರು ಆಸ್ತಿಕ ಭಕ್ತರ ಹೃದಯಕ್ಕೆ ಮುದ ನೀಡುವ ಹೆಸರು, ಪಂಡಿತ-ವಿದ್ವಾಂಸರ ಜ್ಞಾನ ಪೀಠವಿದು. ಶ್ರೀ ವಿಶಾಲಾಕ್ಷಿ ಅಮ್ಮನವರ ಶಕ್ತಿಪೀಠ, ಶ್ರೀ ಅನ್ನಪೂರ್ಣೆಯ ವಾತ್ಸಲ್ಯದ ಪಕ್ವಾನ್ನದ ಪಾಕಶಾಲೆ, ಸ್ವಯಂ ಕಾರ್ತಿಕೇಯರು ಅಗಸ್ತ್ಯ ಮಹರ್ಷಿಗಳಿಗೆ ಯಾವ ಸ್ಥಾನದ ಮಹಿಮೆ ಯನ್ನು ಹಾಡಿಹೊಗಳಿದರೋ ಆ ಕಾಶಿ. ಶ್ರೀ ವಿಶ್ವನಾಥೇಶ್ವರನ ಕಾಶಿ. ಈ ಪವಿತ್ರ ಭೂಮಿಯಲ್ಲಿ ವರುಣ ಮತ್ತು ಅಸಿ ಎಂಬ ನದಿ ಗಳು ಸೇರುವುದರಿಂದ ಇದಕ್ಕೆ ವಾರಾಣಸಿ ಎಂಬ ಹೆಸರೂ ಇದೆ.

ಇಂಥ ದಿವ್ಯನಗರಿ ಕಾಶಿಗೆ ಶ್ರೀ ಠಾಕೂರರು ಮತ್ತು ಯಾತ್ರಾರ್ಥಿ ಗಳು ದೋಣಿಯ ಮೂಲಕ ಗಂಗಾನದಿಯಲ್ಲಿ ಆಗಮಿಸಿದರು. ಈ ಸಮಯದಲ್ಲೇ ಭಗವಾನರಿಗೆ ಅತ್ಯದ್ಭುತವಾದ ದರ್ಶನವೊಂದಾ ಯಿತು. ಇಡೀ ಕಾಶಿಯೇ ಸ್ವರ್ಣದಿಂದ ಆಗಿರುವಂತೆ ಅವರಿಗೆ ಗೋಚರವಾಯಿತು. ವಿಶ್ವನಾಥನ ವಿಶ್ವಾತೀತವಾದ ನಗರಿಯ ಸೂಕ್ಷ್ಮ ದರ್ಶನವನ್ನು ಅವರು ಮಾಡಿದರು. ಸ್ವರ್ಣ ಕಾಶಿಯನ್ನು ಕಂಡರು. ಇದರ ಮೂಲಕ ಶಾಸ್ತ್ರಗಳಲ್ಲಿ ಉಲ್ಲೇಖಿಸಿರುವ ಸ್ವರ್ಣ ಕಾಶಿಯ ಸತ್ಯತೆ ಇಡೀ ಆಸ್ತಿಕ ಸಮಾಜಕ್ಕೆ ದೃಢವಾಗುತ್ತದೆ. ತದನಂತರ ಶ್ರೀರಾಮಕೃಷ್ಣರಿಗೆ ಕಾಶಿಯ ಪಾವಿತ್ರ್ಯದ ಬಗ್ಗೆ ಅದೆಷ್ಟು ಧೃಡತೆ ಉಂಟಾಯಿತೆಂದರೆ, ಶೌಚಕ್ಕೂ ಅವರು ಕಾಶಿಯ ಸೀಮೆಯ ಹೊರಹೋಗುತ್ತಿದ್ದರು. ಕೆಲದಿನಗಳ ನಂತರ ಅವರು ಈ ಭಾವ ದಿಂದ ಮುಕ್ತರಾದರು. ಕಾಶಿಯ ಬಗ್ಗೆ ಅತ್ಯಂತ ಉನ್ನತ ಭಾವನೆ ಗಳನ್ನು ಹೊಂದಿದ್ದ ಅವರು ಅಲ್ಲಿ ಸ್ವಲ್ಪ ಕಾಲ ಕಳೆದ ನಂತರ, ''ನಾನು ಭಾವಿಸುತ್ತಿದ್ದೆ ಕಾಶಿಯಲ್ಲಿ ಎಲ್ಲರೂ ಶಿವನ ಧ್ಯಾನದಲ್ಲಿ ಇಪ್ಪತ್ತನಾಲ್ಕು ಗಂಟೆ ಸಮಾಧಿಸ್ಥರಾಗಿರುತ್ತಾರೆ ಎಂದು. ಆದರೆ ಇಲ್ಲಿ ನಾನು ಎಲ್ಲವನ್ನೂ ವಿಪರೀತವಾಗಿ ಕಾಣುತ್ತಿದ್ದೇನೆ'' ಎಂದು ತಮ್ಮ ಖೇದವನ್ನು ವ್ಯಕ್ತಪಡಿಸಿದರು. ನಿರಂತರ ಮಹಾದೇವನ ಮಹಾ ಅಸ್ತಿತ್ವದ ಮಹಿಮೆಯನ್ನು ಅನುಭವಿಸುತ್ತಿದ್ದ ಅವರು ಉಳಿದವ ರಿಗೆ ಈ ಭಾಗ್ಯವಿಲ್ಲದಿರುವುದನ್ನು ಕಂಡು ದುಃಖಿತರಾದರು.

ಮಥುರನು ಅವರಿಗೆ ಅಲ್ಲಿಯ ವಿವಿಧ ದೇವಸ್ಥಾನಗಳ ದರ್ಶನ ಮಾಡಲು ವ್ಯವಸ್ಥೆ ಮಾಡಿದನು. ಅವರು ಹೊರತೆರಳಿ ದಾಗ ಅವರ ತಲೆಯ ಮೇಲೆ ಬೆಳ್ಳಿಯ ಛತ್ರಿಯನ್ನು, ಅವರ ಮುಂದೆ ಲಾಂಛನವುಳ್ಳ ದಂಡಗಳನ್ನು ಹಿಡಿದ ಸೇವಕರು ಅವರಿಗೆ ರಾಜೋಚಿತವಾದ ಮರ್ಯಾದೆಯನ್ನು ಮಾಡಿಕೊಂಡು ಹೋಗು ತ್ತಿದ್ದರು. ಪ್ರತಿನಿತ್ಯ ಶ್ರೀ ವಿಶ್ವನಾಥೇಶ್ವರನ ದರ್ಶನಕ್ಕೆ ಹೋಗಿ ಬರಲು ಮಥುರನು ಪಲ್ಲಕ್ಕಿಯ ವ್ಯವಸ್ಥೆ ಮಾಡಿದನು. ಅಲ್ಲಿನ ಗುಡಿಗಳಲ್ಲಿ ದೇವರ ಶ್ರೀವಿಗ್ರಹಗಳ ದರ್ಶನ ಮಾಡಿದಾಗಲೆಲ್ಲಾ ಅವರು ಸಮಾಧಿಗೆ ಏರುತ್ತಿದ್ದರು. ಆದರೆ ಅವರ ಈ ಸಮಾಧಿ ಅವಸ್ಥೆ

ಅತ್ಯಂತ ಗಾಢವಾಗಿ ಕಂಡು ಬಂದಿದ್ದು ಕಾಶಿಯ ಶ್ರೀ ಕೇದಾರ ನಾಥ ದೇವಸ್ಥಾನದಲ್ಲಿ!

ಒಮ್ಮೆ ಮಥುರ ಶ್ರೀಠಾಕೂರರನ್ನು ಕಾಶಿಯ ಐದು ಮುಖ್ಯ ಸ್ಥಳಗಳ ದರ್ಶನಕ್ಕೆಂದು ದೋಣಿಯಲ್ಲಿ ಕರೆತಂದನು. ಅವುಗಳಲ್ಲಿ ಮಣಿಕರ್ಣಿಕಾ ಘಾಟ್ ಪ್ರಮುಖವಾದುದು. ದೋಣಿ ಈ ಘಟ್ಟ ವನ್ನು ಸಮೀಪಿಸುತ್ತಿದ್ದಂತೆ ವಾತಾವರಣವೆಲ್ಲ ಅಲ್ಲಿ ಸುಡುತ್ತಿದ್ದ ಚಿತೆ ಗಳಿಂದ ಹೊರಹೊಮ್ಮುತ್ತಿರುವ ಹೊಗೆಯಿಂದ ತುಂಬಿ ಹೋಗಿತ್ತು. ದೋಣಿಯಲ್ಲಿ ಕುಳಿತಿದ್ದ ಶ್ರೀ ಠಾಕೂರರು ದೋಣಿಯ ಮುಂತುದಿಗೆ ಓಡಿದರು. ಇದ್ದಕ್ಕಿದ್ದಂತೆ ಅವರಿಗೆ ಅಪೂರ್ವ ದರ್ಶನವೊಂದಾಯಿತು. ಎತ್ತರದ ಬಿಳಿಯ ಬಣ್ಣದ ಜಡೆಗಳನ್ನುಳ್ಳ ವ್ಯಕ್ತಿಯೋರ್ವನು ಪ್ರತಿ ಯೊಂದು ಚಿತೆಯನ್ನು ಸಮೀಪಿಸಿ, ಮಲಗಿರುವ ಜೀವಿಗಳನ್ನು ಎತ್ತಿ ಅವರುಗಳ ಕಿವಿಯಲ್ಲಿ ತಾರಕ ಬ್ರಹ್ಮ ಮಂತ್ರವನ್ನು ಉಪ ದೇಶಿಸುತ್ತಿದ್ದುದನ್ನು ಅವರು ಕಂಡರು. ಇನ್ನೊಂದೆಡೆ ಸರ್ವಶಕ್ತ ಳಾದ ಜಗದಂಬೆ ಮಹಾಕಾಳಿಯು ಆ ಜೀವಿಗಳ ತ್ರಿವಿಧ ರೀತಿಯ ಬಂಧನಗಳನ್ನು ಬಿಡಿಸಿ, ಅಖಂಡವಾದ ಮುಕ್ತಿಯ ಬಾಗಿಲನ್ನು ತೆರೆಯುತ್ತಿದ್ದಳು. ಅವರೇ ಹೇಳುವಂತೆ ಜಗತ್ತಿನ ಗಾಂಭೀರ್ಯ ವನ್ನೆಲ್ಲಾ ಮೈಗೂಡಿಸಿಕೊಂಡ ಮೂರ್ತಿಯಾಗಿ ಶ್ರೀ ವಿಶ್ವನಾಥ ಮಹಾದೇವನು ಅವರಿಗೆ ಕಂಡನು. ಮೊದಲು ಶ್ರೀ ವಿಶ್ವನಾಥನು ಅವರಿಗೆ ದೂರದಲ್ಲಿ ಕಂಡನು. ನಂತರ ಅವರನ್ನು ಸಮೀಪಿಸು ತ್ತಿದ್ದಂತೆ ಕಾಣಿಸಿಕೊಂಡನು. ಕೊನೆಗೆ ಶ್ರೀ ವಿಶ್ವನಾಥನು ಅವರಲ್ಲೇ ಲೀನವಾಗಿ ಹೋದನು!

ಕಾಶಿ ಮಹಾತ್ಮೆಯಲ್ಲಿ ಶ್ರೀಅನ್ನಪೂರ್ಣೆಯನ್ನು ಭವಾನಿ ಎಂದು ಕರೆದಿದ್ದಾರೆ. ಆಕೆ ಕಾಶಿ-ಪುರ-ಅಧೀಶ್ವರಿ. ಒಮ್ಮೆ ಕಾಶಿಯಲ್ಲಿ ಸಂನ್ಯಾಸಿ ಯೋರ್ವ ಶ್ರೀರಾಮಕೃಷ್ಣರನ್ನು ಕೈಹಿಡಿದು ಕರೆದುಕೊಂಡು ಹೋದಂತೆ ಅವರಿಗೆ ತೋರಿತು. ಅವರೀರ್ವರೂ ಅನ್ನಪೂರ್ಣೆಯ ದೇಗುಲ ವನ್ನು ಪ್ರವೇಶಿಸಿದರು. ಅವರಿಗೆ ಸ್ವರ್ಣ ಅನ್ನಪೂರ್ಣೆಯ ದರ್ಶನ ವಾಯಿತು. ಶ್ರೀರಾಮಕೃಷ್ಣರೆನ್ನುತ್ತಿದ್ದರು, ಅನ್ನಪೂರ್ಣೆಯ ಗುಡಿ ಯಾದ ಕಾಶಿಯಲ್ಲಿ ಯಾರೂ ಉಪವಾಸವಿರಲಾರರು ಎಂಬುದು ಸತ್ಯ. ಆದರೆ ಕೆಲವರು ಸಂಜೆಯವರೆಗೆ ಕಾಯಬೇಕಷ್ಟೆ! ಮಾತೆ ಅನ್ನಪೂರ್ಣೆಯು ಭೌತಿಕ ಮತ್ತು ಆಧ್ಯಾತ್ಮಿಕ ಆಹಾರ ನೀಡುವ ಲೋಕಮಾತೆ.

ಶ್ರೀರಾಮಕೃಷ್ಣರು ಎಲ್ಲೇ ಹೋದರೂ ಅಲ್ಲಿಯ ಸಂತ-ಮಹಾತ್ಮ ರನ್ನು ಭೇಟಿಯಾಗುತ್ತಿದ್ದರು. ಈಗ ಶ್ರೀರಾಮಕೃಷ್ಣರು ಕಾಶಿಯ ಪ್ರಸಿದ್ಧ ಸಂತರಾದ ತ್ರೈಲಂಗ ಸ್ವಾಮಿಗಳನ್ನು ಭೇಟಿಯಾದರು. ಅವರ ಮೊದಲ ಭೇಟಿಯಲ್ಲಿ ತ್ರೈಲಂಗ ಸ್ವಾಮಿಗಳು ಶ್ರೀರಾಮ ಕೃಷ್ಣರ ಮುಂದೆ ನಶ್ಯದ ಡಬ್ಬಿ ಇಡುವ ಮೂಲಕ ಸ್ವಾಗತ ಕೋರಿದರು. ಶ್ರೀರಾಮಕೃಷ್ಣರು ಆ ನಶ್ಯವನ್ನು ಉಪಯೋಗಿಸುವು ದರ ಮೂಲಕ ತಮ್ಮ ಅನುಮೋದನೆಯನ್ನು ಸೂಚಿಸಿದರು. ಕಾಶಿ ಯಲ್ಲಿರುವಷ್ಟು ಕಾಲ ಶ್ರೀ ಠಾಕೂರರು ಅನೇಕ ಬಾರಿ ಈ ಸ್ವಾಮಿ ಗಳನ್ನು ಭೇಟಿ ಮಾಡಿದರು. ಅವರೇ ಹೇಳುವಂತೆ ''ಸ್ವಯಂ ವಿಶ್ವ ನಾಥನು ತ್ರೈಲಂಗ ಸ್ವಾಮಿಗಳ ಶರೀರವನ್ನು ತನ್ನ ದೈವತ್ವದ ಪ್ರಕಾಶ ಕ್ಕಾಗಿ ವಾಹನದಂತೆ ಬಳಸುತ್ತಿದ್ದುದ್ದನ್ನು ನಾನು ಕಂಡೆ.'' ಕಾಶಿಯು ಈ ಸ್ವಾಮಿಗಳ ವಾಸದಿಂದ ಇನ್ನೂ ಹೆಚ್ಚು ಪ್ರಕಾಶಮಾನ ವಾಯಿತು.

ಇಲ್ಲಿ ನಡೆದ ಇನ್ನೊಂದು ಪ್ರಮುಖ ಘಟನೆ - ಶ್ರೀ ರಾಮ ಕೃಷ್ಣರು ತಮ್ಮ ತಂತ್ರಗುರು, ಯೋಗೇಶ್ವರಿ-ಭೈರವಿ ಬ್ರಾಹ್ಮಣಿ ಯನ್ನು ಸಂದರ್ಶಿಸಿದ್ದು. ಮುಂದೆ ಬ್ರಾಹ್ಮಣಿಯೂ ತನ್ನ ಪ್ರಿಯ ಶಿಷ್ಯ ಶ್ರೀರಾಮಕೃಷ್ಣರೊಡನೆ ವೃಂದಾವನಕ್ಕೆ ತೆರಳಿದಳು. ಕೆಲ ಕಾಲ ಅಲ್ಲಿದ್ದು, ಶ್ರೀ ಠಾಕೂರರು ದಕ್ಷಿಣೇಶ್ವರಕ್ಕೆ ಹಿಂದಿರುಗಿದ ನಂತರ ಈಕೆ ದೇಹತ್ಯಾಗ ಮಾಡಿದಳು.

## ಪ್ರಯಾಗದೆಡೆಗೆ

ಒಂದು ವಾರದಷ್ಟು ಕಾಲ ಕಾಶಿಯಲ್ಲಿದ್ದ ಶ್ರೀಪರಮಹಂಸ ದೇವರು ಮತ್ತು ಸಹಯಾತ್ರಿಕರು ಪ್ರಯಾಗಕ್ಕೆ ತೆರಳಿದರು. ಪ್ರಯಾಗ -ಪವಿತ್ರ ಗಂಗೆ, ಯಮುನೆ ಮತ್ತು ಗುಪ್ತ ಸರಸ್ವತಿಯವರ ಪಾವನ ಸಂಗಮ. ಉಳಿದ ಯಾತ್ರಿಕರು ಶಾಸ್ತ್ರದಲ್ಲಿ ಹೇಳಿರುವಂತೆ ಇಲ್ಲಿ ಮುಂಡನ ಮಾಡಿಸಿಕೊಂಡು ತ್ರಿವೇಣಿ ಸಂಗಮದಲ್ಲಿ ಮಿಂದೆದ್ದರು, ಆದರೆ ಶ್ರೀರಾಮಕೃಷ್ಣರು ಹಾಗೆ ಮಾಡದೆ ಬರಿ ಸಂಗಮ ಸ್ನಾನ ಮಾಡಿದರು. ಮುಂಡನದ ಬಗ್ಗೆ ಕೇಳಿದಾಗ ಹಾಗೆ ಮಾಡುವ ಆವಶ್ಯಕತೆ ನನಗಿಲ್ಲ ಎಂದರು.

ಶ್ರೀರಾಮಕೃಷ್ಣ ಪೂಂಥಿಯಲ್ಲಿ ಅಕ್ಷಯ ಕುಮಾರ್ ಸೇನ್ ಹೇಳುವಂತೆ ಪ್ರಯಾಗದಲ್ಲಿದ್ದಾಗ ಶ್ರೀರಾಮಕೃಷ್ಣರನ್ನು ದಯಾ ನಂದ ಸರಸ್ವತಿಗಳ ಶಿಷ್ಯರೋರ್ವರು ಕಾಣಬಂದರು. ಆತ ದೇವ-ದೇವಿಯರು ಎಂಬುವವರ ಅಸ್ತಿತ್ವವೇ ಇಲ್ಲ ಬದಲಾಗಿ ಇವೆಲ್ಲಾ ಬರಿಯ ಮಾಯೆಯ ಆಟವೆಂದು ವಾದ ಮಾಡತೊಡಗಿದನು. ಶ್ರೀ ರಾಮಕೃಷ್ಣರ ಯಾವುದೇ ತರ್ಕಕ್ಕೂ, ಶಾಸ್ತ್ರವಾಕ್ಯಕ್ಕೂ, ಆತನು ಬೆಲೆ ಕೊಡದೆ ತನ್ನ ನಿಲುವನ್ನೇ ಸಮರ್ಥಿಸಿಕೊಂಡನು. ಕೊನೆಗೆ ಶ್ರೀರಾಮಕೃಷ್ಣರು ತಮ್ಮ ಅತಿಮಾನುಷ ಶಕ್ತಿಯಿಂದ ದೇವ-ದೇವಿ ಯರ ಅಸ್ತಿತ್ವವನ್ನು ಅವನು ಒಪ್ಪುವಂತೆ ಮಾಡಿದರು. ದಯಾನಂದ ಸರಸ್ವತಿಗಳ ಶಿಷ್ಯನು ಶ್ರೀರಾಮಕೃಷ್ಣರ ಶ್ರೀಚರಣಗಳಲ್ಲಿ ಶರಣಾ ದನು.

## ಮತ್ತೆ ಕಾಶಿಗೆ

ಪ್ರಯಾಗದಿಂದ ಕಾಶಿಗೆ ಹಿಂದಿರುಗಿದ ಶ್ರೀ ಗುರುಮಹಾ ರಾಜರು ಸುಮಾರು ೧೫ ದಿನಗಳಷ್ಟು ಕಾಲ ಕಾಶಿಯಲ್ಲಿ ಉಳಿ ದರು. ಈಗ ಇಲ್ಲಿಂದ ವೃಂದಾವನಕ್ಕೆ, ವೃಂದಾವನದಿಂದ ಮತ್ತೆ ಕಾಶಿಗೆ ಹೀಗೆ ಯಾತ್ರೆ ಮಾಡಿದರು. ವೃಂದಾವನದಿಂದ ಕಾಶಿಗೆ ಬಂದಾಗ ವಸಂತ ಋತುವಿನ ಚೈತ್ರಮಾಸದ ನವರಾತ್ರಿಯ ಸಮಯ. ಈ ನವರಾತ್ರಿಯನ್ನು ವಾಸಂತಿ ನವರಾತ್ರಿಯೆಂದು ಕರೆಯುತ್ತಾರೆ. ಶ್ರೀದುರ್ಗೆಯನ್ನು ಈ ಸಮಯದಲ್ಲಿ ವಾಸಂತಿ ಎಂದು ಪೂಜಿಸುತ್ತಾರೆ. ಈ ನವರಾತ್ರಿಯಲ್ಲಿ ಶ್ರೀ ಅನ್ನಪೂರ್ಣೆಯ ಪೂಜೆಗೆ ವಿಶೇಷ ಪ್ರಾಶಸ್ತ್ಯವಿದೆ. ಅಷ್ಟಮಿಯಂದು ಶ್ರೀಗುರು ಮಹಾರಾಜರು ಅನ್ನಪೂರ್ಣೇಶ್ವರಿ ಅಮ್ಮನವರ ದೇಗುಲಕ್ಕೆ ತೆರಳಿ ದರ್ಶನ ಪಡೆದರು. ಅಂದು ಅಮ್ಮನವರಿಗೆ ವಿಶೇಷ ಸ್ವರ್ಣಾ ಲಂಕಾರ ಮಾಡಲಾಗಿತ್ತು. ಅಮ್ಮನವರ ದರ್ಶನದಿಂದ ಶ್ರೀಗುರು ಮಹಾರಾಜರು ಅಪೂರ್ವ ಆನಂದದಿಂದ ತುಂಬಿಹೋದರು.

ಶ್ರೀ ಠಾಕೂರರು ಶ್ರೀ ವಿಶ್ವನಾಥನ ಸಂಧ್ಯಾರತಿಯನ್ನು ವೀಕ್ಷಿಸಲು ಕೆಲವೊಮ್ಮೆ ತೆರಳುತ್ತಿದ್ದರು. ಶ್ರೀ ವಿಶ್ವನಾಥ ಮಹಾದೇವರಿಗೆ ಈ ಸಮಯದಲ್ಲಿ ಗಂಧ, ವಿವಿಧ ಪುಷ್ಪ ಮತ್ತು ಪತ್ರಗಳಿಂದ ಸಿಂಗರಿಸಲಾಗುತ್ತಿತ್ತು. ಆದ್ದರಿಂದಲೇ ಈ ಆರತಿಗೆ ಶೃಂಗಾರ ಆರತಿಯೆಂದೇ ಹೆಸರು.

ವೃಂದಾವನದಲ್ಲಿದ್ದಾಗ ಶ್ರೀಪರಮಹಂಸದೇವರಿಗೆ ವೀಣಾವಾದನ ಆಲಿಸಬೇಕೆಂದು ತೀವ್ರ ಇಚ್ಛೆ ಉಂಟಾಗಿತ್ತು, ಆದರೆ ಅದು ಅಲ್ಲಿ ಫಲಿಸಲಿಲ್ಲ. ಮತ್ತೆ ವಾರಾಣಸಿಗೆ ಬಂದಾಗ ಶ್ರೀ ರಾಮಕೃಷ್ಣರಿಗೆ ಈ ಆಸೆ ತೀವ್ರವಾಯಿತು. ಕಾಶಿಯಲ್ಲಿ ಮಹೇಶ ಚಂದ್ರ ಸರ್ಕಾರ್ ಎನ್ನುವ ಪ್ರಸಿದ್ಧ ವೀಣಾವಾದಕರು ಇರುವರೆಂದು ತಿಳಿದೊಡನೆ ಶ್ರೀಪರಮಹಂಸರು ಅವರ ಮನೆಯತ್ತ ನಡೆದೇಬಿಟ್ಟರು. ಶ್ರೀರಾಮಕೃಷ್ಣರು ಕೇಳಿಕೊಂಡ ಕಾರಣ ಮಹೇಶ ಚಂದ್ರ ಸರ್ಕಾರ್ ವೀಣೆಯನ್ನು ಅತ್ಯಂತ ಮಧುರವಾಗಿ ನುಡಿಸತೊಡಗಿದರು. ಇದರಿಂದ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ಅಲ್ಪಸ್ವಲ್ಪ ಪ್ರಕೃತಿಸ್ಥರಾಗುತ್ತ ಭಗವತಿಯನ್ನು ಹೀಗೆಂದು ಪ್ರಾರ್ಥಿಸಿಕೊಂಡರು, ''ಅಮ್ಮಾ, ನನಗೆ ವೀಣಾವಾದನವನ್ನು ಆಲಿಸಲು ಬಿಡು'' ಎಂದು. ಅವರಿಗೆ ಪ್ರಕೃತಿಸ್ಥರಾಗಿ ಬಹಳಹೊತ್ತು ಉಳಿಯಲು ಸಾಧ್ಯವಾಗಲಿಲ್ಲ. ವೀಣಾವಾದನದ ಇಂಚರ ಅವರನ್ನು ಎಷ್ಟು ಪುಳಕಿತರನ್ನಾಗಿ ಮಾಡಿತ್ತೆಂದರೆ ಒಮ್ಮೊಮ್ಮೆ ವೀಣೆಯೊಡನೆ ಅವರು ಹಾಡತೊಡಗಿದರು. ಇದರಿಂದ ತನ್ನ ಮೂರು ಗಂಟೆಗಳ ಕಾಲದ ವೀಣಾವಾದನ ಸಫಲವಾಯಿತು ಎಂದು ಮಹೇಶಚಂದ್ರನು ಪುನಃ ಪುನಃ ಕೃತಕೃತ್ಯನಾದನು. ಹೀಗೆ ಶ್ರೀರಾಮಕೃಷ್ಣರ ಕಾಶಿಯಾತ್ರೆ ಸಫಲವಾಗಿ ಯಾತ್ರಾರ್ಥಿಗಳೆಲ್ಲರೂ ಕಲ್ಕತ್ತೆಗೆ ಹೊರಟು ನಿಂತರು. ಶ್ರೀರಾಮಕೃಷ್ಣರಿಗೆ ಕಾಶಿಯು ಎಷ್ಟು ಪ್ರಿಯವಾಗಿತ್ತೆಂದರೆ – ಅದು ದಕ್ಷಿಣೇಶ್ವರಕ್ಕೆ ಎರಡನೆಯ ಸ್ಥಳವಷ್ಟೆ! ಅವರೇ ಹೇಳಿದಂತೆ ಹೃದಯರಾಮನು ಒಮ್ಮೆ ಅವರನ್ನು ತುಂಬಾ ಪೀಡಿಸಿದಾಗ, ದಕ್ಷಿಣೇಶ್ವರವನ್ನು ತ್ಯಜಿಸಿ ವಾರಾಣಸಿಗೆ ಹೋಗಬೇಕೆಂದುಕೊಂಡಿದ್ದರಂತೆ!

### ವೃಂದಾವನದಲ್ಲಿ

ಕಾಶಿಯಿಂದ ಹೊರಟ ಯಾತ್ರಾರ್ಥಿಗಳು ಶ್ರೀರಾಮಕೃಷ್ಣರೊಡನೆ ಆಗ್ರಾದ ಕ್ಯಾಂಟೋನ್ಮೆಂಟ್‌ವರೆಗೆ ರೈಲಿನಲ್ಲಿ ಬಂದು ಅಲ್ಲಿಂದ ಶ್ರೀಕೃಷ್ಣನ ಮಥುರೆಗೆ ದೋಣಿಯಲ್ಲಿ ಪ್ರಯಾಣಿಸಿದರು. ಶ್ರೀರಾಮಕೃಷ್ಣರು ವೃಂದಾವನವನ್ನು ಮಾಧುರ್ಯದ ಅಮೋಘ ಲೀಲಾಭೂಮಿಯಾಗಿ ಕಾಣುತ್ತಿದ್ದರು. ವೃಂದಾವನಕ್ಕೆ ಬಂದೊಡನೆ ಅವರಿಗೆ ದಿವ್ಯತೆಯ ವಿಶೇಷ ಆವಿರ್ಭಾವದ ಅನುಭವವಾಯಿತು. ಮಥುರೆಯಿಂದ ವೃಂದಾವನಕ್ಕೆ ಆಗಮಿಸುತ್ತಿದ್ದಂತೆಯೆ ಶ್ರೀರಾಮಕೃಷ್ಣರಿಗೆ ಅಪೂರ್ವ ದರ್ಶನವೊಂದಾಯಿತು. ಅವರು ಧ್ರುವ ಘಾಟಿಗೆ ಬಂದೊಡನೆ ನವಜಾತ ಶ್ರೀಕೃಷ್ಣನನ್ನು ಎತ್ತಿಕೊಂಡು ಯಮುನೆಯನ್ನು ದಾಟುತ್ತಿರುವ ವಸುದೇವನನ್ನು ಕಂಡರು. ಅವರು ಈ ಭಾವಾವಸ್ಥೆಯಲ್ಲಿ ಎಷ್ಟು ಆಳವಾಗಿ ಮಗ್ನರಾಗಿ ಹೋದರೆಂದರೆ, ಅವರನ್ನು ವೃಂದಾವನಕ್ಕೆ ಒಂದು ಪಲ್ಲಕ್ಕಿಯಲ್ಲಿ ಕರೆದುಕೊಂಡು ಹೋಗಬೇಕಾಗಿ ಬಂತು. ಅವರು ಸಹಜಸ್ಥಿತಿಗೆ ಬರಲು ಕೆಲವು ಗಂಟೆಗಳೇ ಬೇಕಾದವು. ಇದರಿಂದ ವೃಂದಾವನದಲ್ಲಿ ಶ್ರೀ ಕೃಷ್ಣನ ಜನನಾನಂತರ ವಸುದೇವನು ಶ್ರೀಕೃಷ್ಣನನ್ನು ಎತ್ತಿಕೊಂಡು ಯಮುನೆಯನ್ನು ದಾಟಿದ ಇತಿಹಾಸ ಪುನಃ ಸ್ಪಷ್ಟವಾಗುತ್ತದೆ.

ಶ್ರೀರಾಮಕೃಷ್ಣರು ತಾವು ವೃಂದಾವನದಲ್ಲಿ ಇದ್ದ ಸಮಯವೆಲ್ಲ ಅತ್ಯಂತ ಉಚ್ಚಭಾವಾವಸ್ಥೆಯಲ್ಲಿ ಕಳೆದರು. ಶ್ರೀಚೈತನ್ಯರಂತೆಯೇ ಇವರೂ ಇಲ್ಲಿದ್ದಾಗ ಮೇಯಲು ಹೋದ ಗೋವುಗಳು ಸಂಜೆ ಗೋಧೂಳಿ ಲಗ್ನದಲ್ಲಿ ಹುಲ್ಲುಗಾವಲಿನಿಂದ ತಮ್ಮ ತಮ್ಮ ಮನೆಗೆ ಹಿಂತಿರುಗುತ್ತಿರುವ ದೃಶ್ಯವನ್ನು ಕಂಡು ಅದ್ಭುತ ದೈವೀ ಭಾವದಿಂದ ತುಂಬಿ ಹೋಗುತ್ತಿದ್ದರು. ಆಗ ಅವರ ಇಡೀ ಶರೀರ ಕಂಪೇರಿಬಿಡುತ್ತಿತ್ತು! ಅವರಿಗೆ ವೃಂದಾವನ ಎಷ್ಟು ಹಿಡಿಸಿಹೋಯಿತೆಂದರೆ, ಇನ್ನು ತಮ್ಮ ಉಳಿದ ಆಯಸ್ಸನ್ನು ಅಲ್ಲೇ ಕಳೆಯಲು ತೀರ್ಮಾನಿಸಿದರು! ಅಲ್ಲಿ ಎಲ್ಲೆಲ್ಲೂ ವ್ಯಾಪಿಸಿರುವ ಶ್ರೀಕೃಷ್ಣನ ಚೈತನ್ಯವನ್ನು ಪ್ರತ್ಯಕ್ಷವಾಗಿ ಅನುಭವಿಸಲು, ಅಲ್ಲಿನ ಎಲ್ಲಾ ಸ್ಥಳಗಳಿಗೂ ಭೇಟಿಯಿತ್ತರು. ಜೊತೆಗೆ ಆಗ ನಡೆದ ಎಲ್ಲಾ ಉತ್ಸವಗಳಲ್ಲಿ ಅವರು ಪಾಲ್ಗೊಂಡರು ಎಂಬುವುದರಲ್ಲಿ ಸಂಶಯವಿಲ್ಲ.

ಶ್ರೀಭಗವಾನ್ ಪರಮಹಂಸದೇವರೇ ಮಾಸ್ಟರ್ ಮಹಾಶಯರಿಗೆ ಹೇಳಿರುವಂತೆ ಕಾಲಿಯ ದಮನ ಘಾಟಲ್ಲಿ ಅವರಿಗೆ ವಿಶೇಷ ಭಾವಾವೇಶ ಉಂಟಾಯಿತು. ಅವರ ಅಂತರ್ಯದಿಂದೆದ್ದ ಭಗವತ್ ಭಾವದ ಬುಗ್ಗೆ ಅವರ ಇಡೀ ವ್ಯಕ್ತಿತ್ವವನ್ನೆ ಅವರಿಸಿಬಿಟ್ಟಿತ್ತಂತೆ. ಹೃದಯರಾಮ ಅವರನ್ನು ಈ ಘಟ್ಟದಲ್ಲಿ ಒಂದು ಶಿಶುವಿಗೆ ಸ್ನಾನ ಮಾಡಿಸುವಂತೆ ತೀರ್ಥಸ್ನಾನ ಮಾಡಿಸಿದನು. ಸ್ವಾಮಿ ಪ್ರೇಮಾನಂದರು ಹೃದಯನಿಂದ ವಿಷಯ ಸಂಗ್ರಹಿಸಿ ಬರೆದ ಪತ್ರದಲ್ಲಿ ಹೀಗೆಂದಿದ್ದಾರೆ – ಶ್ರೀ ಠಾಕೂರರು ವೃಂದಾವನದಲ್ಲಿದ್ದ ಅಷ್ಟೂ ದಿನಗಳು ನಿರಂತರ ಭಾವೋದ್ದೀಪ್ತ ಸ್ಥಿತಿಯಲ್ಲೆ ಇದ್ದರು. ಆದ್ದರಿಂದ ಅವರಿಗೆ ಹೆಚ್ಚು ನಡೆಯಲಾಗದೆ ಅವರನ್ನು ಎಲ್ಲೆಡೆ ಪಲ್ಲಕ್ಕಿಯಲ್ಲೆ ಕರೆದೊಯ್ಯಲಾಗುತ್ತಿತ್ತು. ಪಲ್ಲಕ್ಕಿಯ ಎರಡೂ ಬಾಗಿಲುಗಳನ್ನು ತೆರೆದಿಟ್ಟು ರಸ್ತೆಯ ಎರಡು ಬದಿಗಳನ್ನು ಅವರು ವೀಕ್ಷಿಸಲು ಅನುಕೂಲವಾಗುವಂತೆ ಇಡಲಾಗುತ್ತಿತ್ತು. ಒಮ್ಮೊಮ್ಮೆ ಅವರ ಭಾವಾವಸ್ಥೆ ಎಷ್ಟು ಆಳವಾಗಿಬಿಡುತ್ತಿತ್ತೆಂದರೆ, ಅವರು ಒಮ್ಮೆಲೆ ಪಲ್ಲಕ್ಕಿಯಿಂದ ಚಂಗನೆ ಹಾರತೊಡಗುತ್ತಿದ್ದರು. ಹೃದಯ ಅವರನ್ನು ಅತ್ಯಂತ ಕಷ್ಟದಿಂದ ಹಿಡಿದುಕೊಳ್ಳಬೇಕಾಗುತ್ತಿತ್ತು. ಆದ್ದರಿಂದ ಹೃದಯನು ಎಲ್ಲೆಡೆ ಪಲ್ಲಕ್ಕಿಯೊಡನೆ ನಡೆದುಕೊಂಡೇ ಹೋಗಬೇಕಾಗುತ್ತಿತ್ತು.

ದಕ್ಷಿಣೇಶ್ವರಕ್ಕೆ ಹಿಂದಿರುಗಿದ ಮೇಲೆ ಅವರು ಹೇಳುತ್ತಿದ್ದರು – ''ಸಂಧ್ಯಾಸಮಯದಲ್ಲಿ ನಾನು ಯಮುನೆಯ ತಟದಲ್ಲಿ ವಿಹರಿಸುತ್ತಿದ್ದಾಗ ಗೋವುಗಳು ಹುಲ್ಲುಗಾವಲಿನಿಂದ ಮನೆಗಳಿಗೆ ಹಿಂದಿರುಗುವುದನ್ನು ಕಂಡು, ಕೃಷ್ಣವಿರಹದಿಂದ ಪೀಡಿತನಾಗಿ ಹುಚ್ಚರಂತೆ 'ಓ ನನ್ನ ಕೃಷ್ಣನೆಲ್ಲಿ ? ನನ್ನ ಕೃಷ್ಣನೆಲ್ಲಿ ?' ಎಂದು ದುಃಖದಿಂದ ಆಕ್ರಂದಿಸತೊಡಗುತ್ತಿದ್ದೆ!'' ಮತ್ತೊಮ್ಮೆ ವೃಂದಾವನದ ದನಗಾಹಿ ಬಾಲಕರನ್ನು ಕಂಡು 'ಓ ಕೃಷ್ಣ ನೀನೆಲ್ಲಿ' ಎನ್ನುತ್ತಿದ್ದಂತೆ ಅವರು ಪ್ರಜ್ಞಾಹೀನರಾದರು. ಇಲ್ಲಿ ಶ್ರೀಕೃಷ್ಣನು ಲೀಲೆಮಾಡಿ ಆಟವಾಡಿ

ರುವ ಹನ್ನೆರಡು ವನಗಳಿವೆ. ಶ್ರೀಠಾಕೂರರು ಭಕ್ತರೆಲ್ಲರಿಗೂ ಈ ಹನ್ನೆರಡು ವನಗಳನ್ನು ಎಲ್ಲರೂ ನೋಡಲೇಬೇಕು ಎಂದು ಆಜ್ಞೆಯಿತ್ತರು. ಅವರೂ ಸ್ವತಃ ಈ ವನಗಳನ್ನು ದರ್ಶಿಸಲು ಹೊರಟಾಗ, ಮಥುರ ಅವರನ್ನು ಬಿಡಲಿಲ್ಲ . ಕೊನೆಗೆ ಅವರು ಶ್ಯಾಮಕುಂಡ, ರಾಧಾಕುಂಡ, ಮತ್ತು ಗೋವರ್ಧನ ಗಿರಿಗಳನ್ನಷ್ಟೆ ನೋಡುವಂತಾಯಿತು.

ಶ್ಯಾಮಕುಂಡ, ರಾಧಾಕುಂಡಗಳಲ್ಲಿ ಅವರು ಅಲ್ಲಿನ ಸಾಧುಗಳ ಮಣ್ಣಿನ ಸಣ್ಣ ಸಣ್ಣ ಕುಟೀರಗಳನ್ನು ನೋಡಿದರು. ಆ ಸಾಧುಗಳೆಲ್ಲ ಜನರನ್ನು ನೋಡಬಾರದೆಂದು ರಸ್ತೆಗೆ ವಿರುದ್ಧವಾದ ದಿಕ್ಕಿಗೆ ಮುಖ ಮಾಡಿಕೊಂಡು ಸಾಧನೆಗಳಲ್ಲಿ ಮುಳುಗಿದ್ದರು.

ಶ್ರೀಕೃಷ್ಣನ ಗೋವರ್ಧನ ಲೀಲೆ ಎಲ್ಲರಿಗೂ ತಿಳಿದಿರುವಂಥದ್ದೆ. ಶ್ರೀರಾಮಕೃಷ್ಣರು ಗೋವರ್ಧನಗಿರಿಯನ್ನು ಉದ್ದೇಶಿಸಿ ಹೊರಟಾಗ ಭಾವಾವಸ್ಥೆಯಿಂದಾಗಿ ನಡೆಯಲು ಪದೇ ಪದೇ ಅಸಮರ್ಥರಾಗುತ್ತಿದ್ದ ಕಾರಣ ಪಲ್ಲಕ್ಕಿಯನ್ನೇರಿದರು. ಆದರೆ ಹೃದಯನಿಗೆ ತೀರ್ಥಾರ್ಥಿಯಂತೆ ನಡೆದೇ ಬರಲು ಆಗ್ರಹಿಸಿದರು. ಹೃದಯ ಅಂತೆಯೆ ಮಾಡಿದನು. ಶ್ರೀ ಠಾಕೂರರು ಗೋವರ್ಧನ ಗಿರಿಯನ್ನು ಕಂಡೊಡನೆ ಒಂದು ಅಗೋಚರವಾದ ಶಕ್ತಿಯಿಂದ ಪ್ರೇರಿತರಾಗಿ, ದೈವಿಕ ಆವೇಶದಿಂದ ತುಂಬಿಹೋಗಿ, ಒಮ್ಮೆಗೆ ಆ ಗಿರಿಯ ತುದಿಗೆ ಓಡಿದರು! ಅಲ್ಲಿ ಅವರಿಗೆ ಜಗತ್ತಿನ ಪರಿವೆಯೇ ಇಲ್ಲದಂತಾಯಿತು. ಕೊನೆಗೆ ಅಲ್ಲಿನ ಸ್ಥಳೀಯರೆ ಅವರನ್ನು ಗಿರಿಯಿಂದ ಕೆಳಕ್ಕೆ ಕರೆತಂದರು. ಹೀಗೆ ಅತ್ಯಂತ ತೀವ್ರ ಮತ್ತು ವಿಭಿನ್ನ ಭಾವಾವಸ್ಥೆಗಳನ್ನು ಅವರು ಅನುಭವಿಸುತ್ತಿದ್ದರು. ನಿಜ ಹೇಳಬೇಕಾದರೆ ಶ್ರೀಪರಮಹಂಸದೇವರು ಅಲ್ಲಿದ್ದಾಗ ಭಾವಾವೇಶದಿಂದ ಕೂಡಿರದ ಸಮಯವೇ ಇರಲಿಲ್ಲ. ಅಲ್ಲಿನ ವನ, ಪರಿಸರ, ಹುಲ್ಲುಗಾವಲು, ಪ್ರಕೃತಿ – ಇವುಗಳನ್ನೆಲ್ಲ ಕಂಡು ಆನಂದಿಸುತ್ತಿದ್ದರು. ಶ್ಯಾಮಕುಂಡ, ರಾಧಾಕುಂಡಗಳಿಗೆ ಹೋಗುವ ದಾರಿಯಲ್ಲಿ ತರು, ಲತೆ, ವೃಕ್ಷ, ಪಕ್ಷಿ, ಜಿಂಕೆಗಳನ್ನು ಕಂಡು ಅತೀವ ಭಗವದಾನಂದದಿಂದ ತುಂಬಿ ತುಳುಕುತ್ತಿದ್ದರು. ಮತ್ತೊಮ್ಮೆ, ''ಓ ಕೃಷ್ಣ! ಹಿಂದೆ ಇದ್ದಂತೆ ಎಲ್ಲವೂ ಇಲ್ಲಿದೆ, ಆದರೆ ನೀನೊಬ್ಬನಿಲ್ಲ'' ಎಂದು ವ್ಯಾಕುಲರಾಗಿ ಅಳುತ್ತಿದ್ದರು. ಹೀಗೆ ಗೋಗರೆದು ಗೋವಿಂದನಿಗಾಗಿ ಅತ್ತು ಅವರ ವಸ್ತ್ರಗಳೆಲ್ಲ ತೊಯ್ದುಹೋದವು. ಪಲ್ಲಕ್ಕಿಯಲ್ಲಿ ಕುಳಿತಿದ್ದ ಅವರ ಮಾತಿನ ಶಕ್ತಿಯೆ ಕುಂದಿಹೋಯಿತು. ಗೋವರ್ಧನಾದಿ ಸ್ಥಳಗಳಿಗೆ ಭೇಟಿಕೊಟ್ಟ ಶ್ರೀರಾಮಕೃಷ್ಣರಿಗೆ ಈ ಎಲ್ಲಾ ಸ್ಥಳಗಳು ವ್ರಜಧಾಮಕ್ಕಿಂತಲೂ ಆಪ್ಯಾಯಮಾನವಾದವು. ಪರಮಪುರುಷ ಶ್ರೀಕೃಷ್ಣ ಮತ್ತು ಪ್ರೇಮಾರಾಧನೆಯ ಪರದೇವತೆ ಶ್ರೀಮತಿ ರಾಧೆಯ ಅಸಂಖ್ಯ ದರ್ಶನಗಳು ಅವರಿಗಾದವು. ವ್ರಜಭೂಮಿಯ ರಸೋಪಾಸನೆ ಅವರ ಹೃದಯವನ್ನೆಲ್ಲಾ ಆವರಿಸಿಬಿಟ್ಟಿತು.

ಮಥುರನು ಶ್ರೀರಾಮಕೃಷ್ಣರ ಶ್ರೀಕರಗಳಿಂದ ದಾನಮಾನಗಳನ್ನು ಮಾಡಿಸಲು ಪಲ್ಲಕ್ಕಿಯ ಒಂದು ಬದಿಯಲ್ಲಿ ಹಣ-ದ್ರವ್ಯಾದಿಗಳನ್ನು ಒಟ್ಟುತ್ತಿದ್ದನು. ಆದರೆ ಶ್ರೀಠಾಕೂರರು ಭಗವದ್ ರಸಾನಂದ ಭರಿತರಾಗಿದ್ದರಿಂದ ಅವುಗಳನ್ನು ತಮ್ಮ ಕೈಗೆತ್ತಿಕೊಳ್ಳುವುದಿರಲಿ, ಸ್ಪರ್ಶಿಸಲೂ ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ಅವರು ಈ ಹಣ-ದ್ರವ್ಯಾದಿಗಳನ್ನು ಬಡ-ಬಗ್ಗರ, ಬ್ರಾಹ್ಮಣ-ಪಂಡಿತರ ಮುಂದೆ ಚೆಲ್ಲುವಂತೆ ಅವುಗಳ ಕೆಳಗೆ ಹಾಸಿದ ಬಟ್ಟೆಯನ್ನು ಎಳೆದು ಕೊಡವಿಬಿಡುತ್ತಿದ್ದರು.

ವೃಂದಾವನದಲ್ಲಿ ತಾವೇಕೆ ಒಂದೇ ಸ್ವರ ಊದುವವರಾಗಬೇಕು, ಬದಲಾಗಿ ವಿವಿಧ ರಾಗ-ರಾಗಿಣಿಗಳನ್ನು ಬಲ್ಲವರೂ, ಆಸ್ವಾದಿಸುವವರೂ ಆಗಬೇಕೆಂದು ಭಾವಿಸಿ, ವೈಷ್ಣವದೀಕ್ಷೆಯನ್ನು ಪಡೆಯಲು ಮುಂದಾದರು. ದಕ್ಷಿಣೇಶ್ವರದಲ್ಲಾಗಲೆ ಅವರು ವೈಷ್ಣವ ಸಾಧನೆ ಮಾಡಿ, ಅದರಲ್ಲಿ ಸಿದ್ಧರಾದವರು! ಆದರೂ ಈಗ ವೃಂದಾವನದಲ್ಲಿ ವೈಷ್ಣವ ದೀಕ್ಷೆ ಪಡೆಯಲು ಉದ್ಯುಕ್ತರಾದರು. ರಾಧಾಕುಂಡದ ಹತ್ತಿರ ವಾಸಿಸುತ್ತಿದ್ದ 'ಚತುರ' ಎನ್ನುವ ವೈಷ್ಣವನ ಹತ್ತಿರ ವೈಷ್ಣವದೀಕ್ಷೆ ಪಡೆದು ಹದಿನೈದು ದಿನಗಳ ಕಾಲ ಶಾಸ್ತ್ರರೀತ್ಯಾ ಪರಮ ವೈಷ್ಣವನಂತೆ ಸಾಧನೆಮಾಡಿದರು. ಅವರ ವೇಷ-ಭೂಷಣವೆಲ್ಲಾ ಒಬ್ಬ ಗೋಸ್ವಾಮಿಯಂತೆಯೆ ಆಗಿಬಿಟ್ಟಿತ್ತು. ಶ್ರೀಠಾಕೂರರಿಗೆ ಗೋಪಿಯರ ಅವ್ಯಭಿಚಾರಿ-ಪರಾಭಕ್ತಿ ಆದರ್ಶವಾಯಿತು. ಶ್ರೀಮತಿ ರಾಧೆಯ ಅನುರೂಪವಾಗಿ ಅವರ ಎದೆ ಸದಾ ಪ್ರಾಣವಲ್ಲಭ ಶ್ರೀಕೃಷ್ಣನಿಗಾಗಿ ವ್ಯಾಕುಲಗೊಂಡಿತು.

ಅವರ ವೃಂದಾವನದ ಒಂದು ಮುಖ್ಯ ಭಾಗ – ಗಂಗಾಮಾಯಿಯದ್ದು. ನಿಧುವನದ ಹತ್ತಿರ ವಾಸವಿದ್ದ ಈಕೆ ಶ್ರೀಕೃಷ್ಣನೊಡನೆ ಒಂದಾಗಲು ತನ್ನ ಇಡೀ ಜೀವನ ಮುಡಿಪಾಗಿಟ್ಟವಳು. ಈಕೆ ಶ್ರೀಹರಿದಾಸ ಸ್ವಾಮಿಗಳ ಸಖೀ ಸಂಪ್ರದಾಯಕ್ಕೆ ಸೇರಿದವಳು. ಅಲ್ಲಿಯ ಜನ ಆಕೆಯನ್ನು ಶ್ರೀಮತಿ ರಾಧಿಕೆಯ ಸಖಿ ಲಲಿತೆಯ ಅವತಾರವೆಂದೆ ನಂಬಿ, ಭಕ್ತ್ಯಾದರಗಳಿಂದ ಕಾಣುತ್ತಿದ್ದರು. ಈಕೆ ಸಹಜ ಭಾವಸಮಾಧಿಗೇರುತ್ತಿದ್ದಳು. ಇದನ್ನು ಕಾಣಲು ಜನ ಸೇರುತ್ತಿದ್ದರು. ಒಮ್ಮೆ ಈಕೆಗೆ ಭಗವದ್ ಭಾವೋದ್ದೀಪನವಾಗಿ ಹೃದಯರಾಮನ ಹೆಗಲನ್ನೇರಿದ್ದಳು! ಇಷ್ಟು ಉನ್ನತಮಟ್ಟದ ಮಧುರ ಸಾಧಕಿ ಶ್ರೀಪರಮಹಂಸದೇವರನ್ನು ಗುರುತಿಸಲಾರಳೆ? ಆಕೆ ಅವರಲ್ಲಿ ಮಹಾಭಾವದ ಸ್ಪಷ್ಟ ಲಕ್ಷಣಗಳನ್ನು ಕಂಡುಹಿಡಿದೇಬಿಟ್ಟಳು. ಅವರನ್ನು ಪ್ರೀತಿಯಿಂದ 'ದುಲಾಲಿ' (ಕನ್ನಡದಲ್ಲಿ – ಅಕ್ಕರೆಯ ಹೆಣ್ಣು) ಯೆಂದು ಸಂಬೋಧಿಸುತ್ತಿದ್ದಳು. ಶ್ರೀ ಗುರುಮಹಾರಾಜರು ಮತ್ತು ಈಕೆಯು ಪರಸ್ಪರ ಎಷ್ಟು ಪ್ರೀತ್ಯಾದರಗಳಿಂದ ಇದ್ದರು ಎಂದರೆ, ಶ್ರೀಠಾಕೂರರು ಈಕೆಯ ಕುಟೀರದಲ್ಲೇ ತಂಗಿದರು. ಮಥುರ ಮತ್ತು ಇತರ ಯಾತ್ರಾರ್ಥಿಗಳು ಈಕೆಯಿಂದಾಗಿ ಶ್ರೀಠಾಕೂರರು ದಕ್ಷಿಣೇಶ್ವರವನ್ನೇ ತ್ಯಜಿಸಿಬಿಡಬಹುದು ಎಂದು ಹೆದರಿದರು. ಶ್ರೀರಾಮಕೃಷ್ಣರೇ ಹೇಳುವಂತೆ ಅವರಿಗೆ ಕಲ್ಕತ್ತೆಗೆ ಹಿಂದಿರುಗುವ ಮನಸ್ಸೇ ಇರಲಿಲ್ಲವಂತೆ! ಅವರು ಗಂಗಾಮಾಯಿಯೊಡನೆ ಇರಬೇಕೆಂದು ನಿರ್ಧರಿಸಿ ಆಗಿತ್ತು. ಎಲ್ಲಾ ವ್ಯವಸ್ಥೆಯೂ ಆಗಿಹೋಗಿತ್ತು. ಹೃದಯ ಕಲ್ಕತ್ತೆಗೆ ಹೋಗೋಣವೆಂದು – ಶ್ರೀರಾಮಕೃಷ್ಣರು ಬೇಡವೆಂದು. ಒಂದೆಡೆ ಹೃದಯ, ಮತ್ತೊಂದೆಡೆ ಗಂಗಾಮಾಯಿ, ನಡುವೆ ಶ್ರೀರಾಮಕೃಷ್ಣರು! ಒಬ್ಬರು ಕಲ್ಕತ್ತೆಗೆ ಹೋಗೋಣವೆಂದು, ಇನ್ನೊಬ್ಬರು ಇಲ್ಲೇ ಇರಿ ಎಂದು ಶ್ರೀರಾಮಕೃಷ್ಣರನ್ನು ಅತ್ತಿತ್ತ ಎಳೆದಾಡಿಯೇಬಿಟ್ಟರು! ಆದರೂ

ಅವರಿಗೆ ವೃಂದಾವನದಲ್ಲೇ ಉಳಿಯಬೇಕೆಂಬಾಸೆ. ಇಷ್ಟರಲ್ಲೆ ಅವರಿಗೆ ತಮ್ಮ ಜನ್ಮದಾತೆ ಚಂದ್ರಮಣಿದೇವಿಯ ನೆನಪಾಯಿತು. ಈ ಒಂದೇ ಆಲೋಚನೆ ಎಲ್ಲವನ್ನೂ ತಲೆಕೆಳಗಾಗಿಸಿಬಿಟ್ಟಿತು. ಇಲ್ಲೇ ಇದ್ದು ಬರೀ ತಾಯಿಯ ಬಗ್ಗೆ ಚಿಂತಿಸತೊಡಗಿದರೆ, ಅವರ ಭಕ್ತಿ ಹಾರಿ ಹೋಗುವುದು; ಬದಲಾಗಿ ಆಕೆಯ ಜೊತೆಗೆ ಇದ್ದು ಭಗವಂತನನ್ನು ಧ್ಯಾನಿಸುವುದು ಉತ್ತಮ ಎಂದು ಭಾವಿಸಿ ದಕ್ಷಿಣೇಶ್ವರಕ್ಕೆ ಹೊರಡುವುದಾಗಿ ನಿರ್ಧರಿಸಿದರು. ಇದನ್ನು ಕೇಳಿ ಗಂಗಾಮಾಯಿ ದುಃಖದಿಂದ ಹಿರಿದಾದ ಆಕ್ರಂದನ ಮಾಡಿ ಜೋರಾಗಿ ಅತ್ತುಬಿಟ್ಟಳು. ಶ್ರೀಪರಮಹಂಸದೇವರ ನಿರ್ಗಮನದ ನಂತರ ಆಕೆ ಶ್ರೀಮತಿ ರಾಧೆಯ ಅವತಾರ ಸ್ಥಳವಾದ ಬರ್ಸಾನಾ ಕ್ಷೇತ್ರಕ್ಕೆ ತೆರಳಿದಳು. ತನ್ನ ಇಳಿವಯಸ್ಸಿನಲ್ಲಿಯೇ ಇಹಲೋಕ ತ್ಯಜಿಸಿ, ಗೋಲೋಕ ಧಾಮವನ್ನೈದಿದಳು.

ವ್ರಜಧಾಮದಲ್ಲಿರುವಾಗ ಅಲ್ಲಿನ ಅನೇಕ ದೇಗುಲಗಳನ್ನು ಶ್ರೀರಾಮಕೃಷ್ಣರು ದರ್ಶನಮಾಡಿದರು. ಕೆಲವಂತೂ ಅವರಿಗೆ ಬಹಳ ಹಿಡಿಸಿಬಿಟ್ಟವು. ಬಾಂಕೇಬಿಹಾರಿ ಕೃಷ್ಣನ ದರ್ಶನದಿಂದ ಸಮಾಧಿಸ್ಥರಾದರು. ಮತ್ತು ಶ್ರೀವಿಗ್ರಹವನ್ನು ಸ್ಪರ್ಶಿಸಲು ಇಚ್ಛಿಸಿದರು, ಇನ್ನು ಕೆಲವು ದೇಗುಲಗಳು ಅವರಿಗೆ ಅಷ್ಟೇನೂ ಹಿಡಿಸಲಿಲ್ಲ. ಮಥುರೆಯಲ್ಲಿದ್ದಾಗ ಅವರಿಗೆ ಶ್ರೀಕೃಷ್ಣನ ಗೋಪಾಲ ರೂಪದ ದರ್ಶನ ಸ್ವಪ್ನದಲ್ಲಾಯಿತು. ಅದೇ ರೀತಿಯ ಸ್ವಪ್ನ ಮಥುರನಿಗೂ, ಹೃದಯನಿಗೂ ಆಯಿತು. ಅಲ್ಲಿಂದ ಕಾಶಿಗೆ ಯಾತ್ರಾರ್ಥಿಗಳೆಲ್ಲ ಮತ್ತೆ ಹಿಂದಿರುಗಿದರು.

### ನವದ್ವೀಪದಲ್ಲಿ

೧೮೬೮ ರಲ್ಲಿ ತಮ್ಮ ಅಣ್ಣನ ಮಗ ಅಕ್ಷಯನ ಸಾವಿನ ನಂತರ ಶ್ರೀರಾಮಕೃಷ್ಣರನ್ನು ಹವಾ ಬದಲಾವಣೆಗಾಗಿ ಮಥುರನು ನವದ್ವೀಪಕ್ಕೆ ಕರೆದೊಯ್ದನು. ಈ ಸಾರಿಯ ಪ್ರಯಾಣವೆಲ್ಲ ದೋಣಿಯಲ್ಲೆ. ಶ್ರೀರಾಮಕೃಷ್ಣರು ಮತ್ತು ಮಥುರನು ಕಾಲ್ನಾದ ಮೂಲಕ ನವದ್ವೀಪಕ್ಕೆ ಬಂದರು. ನವದ್ವೀಪ ಶ್ರೀಚೈತನ್ಯಮಹಾಪ್ರಭುಗಳ ಲೀಲಾಸ್ಥಾನ. ಶ್ರೀರಾಧಾಕೃಷ್ಣರು ಒಂದೇ ಶರೀರದಲ್ಲಿ ಆವಿರ್ಭಾವವಾಗಿ, ಶ್ರೀ ಗೌರಾಂಗ ರೂಪದಲ್ಲಿ ಜಗದೋದ್ಧಾರ ಕಾರ್ಯ ಮಾಡಿದರು. ಗಂಗೆ ಮತ್ತು ಜಲಾಂಗಿ ನದಿಗಳು ವಿಧ ವಿಧವಾದ ವಕ್ರತೆಯಿಂದೊಡಗೂಡಿ ಇಡಿಯ ನವದ್ವೀಪ ಪ್ರದೇಶವನ್ನು ಸುತ್ತುವರೆದಿವೆ. ದೋಣಿಯು ನವದ್ವೀಪವನ್ನು ತಲುಪುವ ಮುನ್ನವೆ ಒಂದು ಮರಳಿನ ಗುಡ್ಡೆಯ ಹತ್ತಿರ ಶ್ರೀರಾಮಕೃಷ್ಣರು ಭಾವಾವಿಷ್ಟರಾದರು. ಎಷ್ಟರ ಮಟ್ಟಿಗೆಂದರೆ ಅವರು ಇನ್ನೇನು ನದಿಯಲ್ಲಿ ಬಿದ್ದೇಬಿಡುತ್ತಿದ್ದರು! ಅಷ್ಟರಲ್ಲಿ ಹೃದಯ ಅಲ್ಲಿಗೆ ಓಡಿ ಅವರನ್ನು ಹಿಡಿದುಕೊಂಡ. ಆ ಮರಳಿನ ಗುಡ್ಡೆ ದಾಟಿದ ನಂತರ ಶ್ರೀರಾಮಕೃಷ್ಣರು ಸಹಜಾವಸ್ಥೆಗೆ ಬಂದರು. ಕೇಳಿದಾಗ ಅಲ್ಲಿ ಅವರಿಗೆ ಶ್ರೀ ಚೈತನ್ಯರ ದರ್ಶನವಾಗಿತ್ತೆಂದು ತಿಳಿದುಬಂತು.

ದೋಣಿ ಕೊನೆಗೂ ನವದ್ವೀಪವನ್ನು ತಲುಪಿತು. ಗೌಡೀಯ ವೈಷ್ಣವರಿಗೆ ನವದ್ವೀಪವು ಅತ್ಯಂತ ಪವಿತ್ರ ಕ್ಷೇತ್ರ. ಅನೇಕ ಐತಿಹಾಸಿಕ ಘಟನೆಗಳುಳ್ಳ ದೇವಸ್ಥಾನಗಳು – ವಿಷ್ಣುಪ್ರಿಯಾ ದೇವಿಯಿಂದ ಪೂಜಿತವಾದ ಶ್ರೀಚೈತನ್ಯರ ಪಾದುಕಾ ಮಂದಿರ, ಸಿದ್ಧೇಶ್ವರಿ ಕಾಳಿ, ಶ್ರೀವಾಸಾಂಗಣ, ಸ್ವರ್ಣಗೌರಾಂಗ ಇತ್ಯಾದಿ ಮಂದಿರಗಳು ಪ್ರಸಿದ್ಧ. ಶ್ರೀಪರಮಹಂಸದೇವರು ಈ ಎಲ್ಲ ಮಂದಿರಗಳಿಗೂ ಹೋಗಿ ದರ್ಶನ ಮಾಡಿದರು. ಆಶ್ಚರ್ಯವೆಂಬಂತೆ ಅವರಲ್ಲಿ ಯಾವುದೇ ವಿಶೇಷ ಆಧ್ಯಾತ್ಮಿಕ ಭಾವನೆಗಳು ಮೂಡಲಿಲ್ಲ. ಇದರಿಂದಾಗಿ ಸ್ವತಃ ಅವರೂ ನಿರಾಶರಾದರು. ಯಾವುದೇ ಉನ್ನತ ಆಧ್ಯಾತ್ಮಿಕ ವ್ಯಕ್ತಿ, ವಸ್ತು, ಅಥವಾ ಸ್ಥಳ ಅವರನ್ನು ಉನ್ನತ ಭಾವಾವಸ್ಥೆಗೆ ಕರೆದೊಯ್ಯದೆ ಬಿಡುತ್ತಿರಲಿಲ್ಲ. ಅನಂತರದ ದರ್ಶನದಿಂದ ಶ್ರೀರಾಮಕೃಷ್ಣರು ಸಂತೃಪ್ತರಾದರು. ಶ್ರೀಚೈತನ್ಯರು ಭಗವಂತನ ಅವತಾರವೇ ಆಗಿದ್ದರೆ ಅವರಿಗೆ ಕಿಂಚಿತ್ತಾದರೂ ಅನುಭವ ಆಗಲೇಬೇಕು ಎಂದು ಭಾವಿಸಿದರು. ಈ ಒಂದು ಸಣ್ಣ ದೈವಿಕ ಆವಿರ್ಭಾವವನ್ನು ಹುಡುಕಿಕೊಂಡು ಎಲ್ಲೆಡೆ ಅವರು ಸುತ್ತಾಡಿದರು. ಹಿರಿಯ ಮತ್ತು ಕಿರಿಯ ಗೋಸ್ವಾಮಿಗಳ ಮನೆಗೂ ಹೋಗಿ ಬಂದರು. ಎಲ್ಲಿಯೂ ಅವರಿಗೆ ವಿಶೇಷವಾದದ್ದು ಏನೂ ಕಂಡು ಬರಲಿಲ್ಲ. ಎಲ್ಲಾ ಕಡೆಗಳಲ್ಲಿ ಎರಡು ಕೈಗಳನ್ನು ಎತ್ತಿ ನಿಂತಿರುವ ದಾರುವಿಗ್ರಹವೇ! ಅವರಿಗೆ ಬೇಸರವಾಯಿತು. ಅಲ್ಲಿಗೆ ಹೋದುದಕ್ಕೆ ಸಾರ್ಥಕ್ಯವಿಲ್ಲದಂತಾಯಿತು. ಕೊನೆಗೆ ಅವರು ಕಲ್ಕತ್ತೆಗೆ ಹೊರಡಲು ದೋಣಿಯಲ್ಲಿ ಕಾಲಿಡುತ್ತಿದ್ದಂತೆಯೇ ಅದ್ಭುತ ಮತ್ತು ಅಪರೂಪದ ದರ್ಶನವೊಂದಾಯಿತು. ಅವರೇ ಹೇಳುವಂತೆ ''ಇಬ್ಬರು ಸುಂದರ ತರುಣರು– ಅಂತಹ ಸೌಂದರ್ಯವನ್ನು ನಾನು ಎಲ್ಲೂ ಕಂಡಿಲ್ಲ, ಅವರ ಆಭಾಮಂಡಲ ಕರಗಿದ ಬಂಗಾರದ್ದಾಗಿತ್ತು– ಇಬ್ಬರಿಗೂ ತಲೆಯ ಸುತ್ತ ಬೆಳಕಿನ ಪ್ರಭೆ ಇತ್ತು, ಎರಡು ತೋಳುಗಳನ್ನು ಎತ್ತಿ ನನ್ನತ್ತ ನೋಡುತ್ತ ನನ್ನೆಡೆಗೆ ಆಗಸದಿಂದ ಓಡಿಬರುತ್ತಿದ್ದರು. ನಾನು ಜೋರಾಗಿ ಕೂಗಿಕೊಂಡೆ, 'ಅಲ್ಲಿ ಅವರು ಬರುತ್ತಿರುವರು!, ಅದೋ ಬರುತ್ತಿರುವರು!!' ಇಷ್ಟು ಹೇಳುತ್ತಲೆ ಇರುವಂತೆ ಆ ತರುಣರೀರ್ವರು ಇಲ್ಲಿ (ತಮ್ಮ ಶರೀರವನ್ನು ಸೂಚಿಸುತ್ತ) ಸೇರಿಬಿಟ್ಟರು; ನಾನು ಸಹಜ ಪ್ರಜ್ಞೆಯನ್ನು ಕಳೆದುಕೊಂಡು ನೆಲಕ್ಕೆ ಬಿದ್ದೆ. ನಾನು ನೀರಿಗೆ ಬೀಳಬೇಕಾಗಿತ್ತು. ಆದರೆ ಹೃದೂ ನನ್ನನ್ನು ಹಿಡಿದುಕೊಂಡನು.'' ಶ್ರೀರಾಮಕೃಷ್ಣರ ಸೂಕ್ಷ್ಮ ಮನಸ್ಸು ದಿವ್ಯ ಭಗವದಾವಿರ್ಭಾವನ್ನು ಮತ್ತು ಅದರ ತೀವ್ರತೆಯನ್ನು ಗ್ರಹಿಸುವಷ್ಟು ಪ್ರಬಲವಾಗಿತ್ತು. ಅವರ ಅನುಭವ ಭಗವಂತನು ಶ್ರೀ ಚೈತನ್ಯರೂಪಿಯಾಗಿ ಅವತರಿಸಿ ಪ್ರೇಮಭಕ್ತಿಯನ್ನು ಉಪದೇಶಿಸಿರುವನೇ ಎಂಬ ಪ್ರಶ್ನೆಗೆ ಸಾರ್ವಕಾಲಿಕ ಉತ್ತರವಾಯಿತು. ಅವರು ಸಹಜಾವಸ್ಥೆಗೆ ಬಂದ ನಂತರ ಮಥುರಮೋಹನ ಅವರನ್ನು ಕೇಳಿದ, ''ಬಾಬಾ, ನೀವು ನವದ್ವೀಪವನ್ನು ಹೇಗೆ ಕಂಡು ಹಿಡಿದಿರಿ?'' ಶ್ರೀ ರಾಮಕೃಷ್ಣರು ಅದಕ್ಕೆ ಉತ್ತರವಾಗಿ , ''ಅತಿ ಹೆಚ್ಚು ಮೂಲ ಪ್ರದೇಶಗಳು ಈಗ ಕಳೆದು ಹೋಗಿವೆ. ಈಗ ಬರಿ ಅಲ್ಲಿ ಇಲ್ಲಿ ಮರಳಿನ ಗುಡ್ಡೆಗಳನ್ನು ಮಾತ್ರ ಗಂಗೆಯಲ್ಲಿ ಕಾಣಬಹುದು. ಮೂಲ ನವದ್ವೀಪವು ಇಲ್ಲಿತ್ತು.''

ಗಂಗೆ ಮತ್ತು ಜಲಾಂಗಿ ನದಿಗಳು ಕಾಲಕಾಲಕ್ಕೆ ತಮ್ಮ ಗತಿಯ ದಿಕ್ಕನ್ನು ಬದಲಿಸುತ್ತಲೇ ಇದ್ದು, ಅಲ್ಲಿನ ಇಡೀ ಭೌಗೋಳಿಕ, ಸಾಮಾಜಿಕ, ಮತ್ತು ಆರ್ಥಿಕ ವ್ಯವಸ್ಥೆಯನ್ನು ಹೆಚ್ಚು-ಕಡಿಮೆ

ಮಾಡಿದ್ದವು. ಇತ್ತ ಕಲ್ಕತ್ತೆಗೆ ಹೊರಟ್ಟಿದ್ದ ಶ್ರೀರಾಮಕೃಷ್ಣರ ದೋಣಿ ಸ್ವಲ್ಪ ದೂರ ಚಲಿಸಿದ ನಂತರ ಮತ್ತೆ ಶ್ರೀರಾಮಕೃಷ್ಣರು ಸಮಾಧಿಸ್ಥರಾದರು. ದೋಣಿ ಸ್ವಲ್ಪ ದೂರ ಚಲಿಸಿದ ನಂತರ ಸಹಜಾವಸ್ಥೆಗೆ ಹಿಂದಿರುಗಿದರು. ಆಗ ಮಥುರನು ಶ್ರೀರಾಮಕೃಷ್ಣರಿಗೆ ''ಮೂಲ ಲೀಲಾಸ್ಥಾನಗಳೆಲ್ಲಾ ನೀರಿನಲ್ಲಿ ಮುಚ್ಚಿಹೋಗಿವೆ, ಆದ್ದರಿಂದ ನಿಮಗೆ ಈಗಿನ ನವದ್ವೀಪದಲ್ಲಿ ಯಾವುದೇ ಭಾವೋದ್ದೀಪನವಾಗಲಿಲ್ಲ. ಆದರೆ ನದಿಯ ಬದಿಗೆ ಇರುವ ಈ ಮರಳಿನ ಗುಡ್ಡೆಗಳಲ್ಲಿ ನೀವು ಭಾವಾವಿಷ್ಟರಾಗುತ್ತಿದ್ದೀರಿ'' ಎಂದನು. ನವದ್ವೀಪದಲ್ಲಿ ಶ್ರೀರಾಮಕೃಷ್ಣರಿಗೆ ಆದ ಈ ತೀವ್ರ ಆಧ್ಯಾತ್ಮಿಕ ಅನುಭವ ಶ್ರೀ ಚೈತನ್ಯರ ಐತಿಹಾಸಿಕತೆಗೆ ಪರಿಶೀಲನೆ, ಅಷ್ಟೇ ಅಲ್ಲದೆ ಪುಷ್ಟೀಕರಣವೂ ಆಯಿತು. ಇದರ ಮೂಲಕ ಶ್ರೀಚೈತನ್ಯರಿಗೆ ಸಂಬಂಧಪಟ್ಟ ಮೂಲ ಲೀಲಾಸ್ಥಾನಗಳನ್ನು ಗುರುತಿಸುವಂತಾಯಿತು. ಶ್ರೀರಾಮಕೃಷ್ಣರ ಈ ತೀರ್ಥಯಾತ್ರೆ ಕಳೆದುಹೋದ ತೀರ್ಥವನ್ನು ಕಂಡುಹಿಡಿಯುವಂತಾಯಿತು. ಸ್ವಾಮಿ ಶಾರದಾನಂದರು 'ಶ್ರೀ ರಾಮಕೃಷ್ಣಲೀಲಾಪ್ರಸಂಗ' ಪುಸ್ತಕದಲ್ಲಿ ಈ ಕುರಿತು ಹೀಗೆ ಬರೆದಿದ್ದಾರೆ: ''ಈಗ ಈ ಅನುಭವ ಮತ್ತೆ ಅದೇ ಉನ್ನತ ಭೂಮಿಕೆಯದಾಗಿತ್ತು. ಅಲ್ಲಿಂದಲೇ ಶ್ರೀರಾಮಕೃಷ್ಣರು ಶ್ರೀಚೈತನ್ಯರ ಇರುವಿಕೆಯ ಅನುಭವವನ್ನು ಇಂದಿಗೂ ನವದ್ವೀಪದಲ್ಲಿ ಅನುಭವಿಸಿದ್ದು. ಪುರಾತತ್ವ ಶಾಸ್ತ್ರಜ್ಞರು ಶ್ರೀರಾಮಕೃಷ್ಣರ ಈ ಅನುಭವವನ್ನು ತಮ್ಮ ಅನಿಸಿಕೆಯಾಗಿ 'ಶ್ರೀಚೈತನ್ಯ ಜನ್ಮಸ್ಥಾನ್ ವಿತರ್ಕ - ತಾರ್ ತ್ರುಟಿ ಓ ಸಮಾಧಾನ್' (ಬಂಗಾಳಿ, ೧೯೪೯) ಎಂಬ ಪುಸ್ತಕದಲ್ಲಿ ಸಂಗ್ರಹ ಮಾಡಿದ್ದಾರೆ.

ಹೀಗೆ ಶ್ರೀರಾಮಕೃಷ್ಣರು ಕೆಲವು ಪ್ರಸಿದ್ಧ ಯಾತ್ರಾಸ್ಥಳಗಳಿಗೆ ಭೇಟಿಯಿತ್ತರು. ಏಕೆ ಬರಿ ಈ ಕ್ಷೇತ್ರಗಳಿಗಷ್ಟೆ ಅವರು ಯಾತ್ರೆಗೈದರು? ಸುಪ್ರಸಿದ್ಧ ಕ್ಷೇತ್ರಗಳಾದ ಗಯೆ ಮತ್ತು ಪುರಿಗೆ ಏಕೆ ಹೋಗಲಿಲ್ಲ? ಎಂಬ ಪ್ರಶ್ನೆಗೆ ಉತ್ತರವಿಲ್ಲದೆ - ಕಾಶಿಯಲ್ಲಿರುವಾಗ ಒಮ್ಮೆ ಮಥುರನು ಗಯೆಗೆ ದರ್ಶನಾರ್ಥವಾಗಿ ಹೋಗುವ ಆಲೋಚನೆಯನ್ನು ಅವರ ಮುಂದೆ ವ್ಯಕ್ತಪಡಿಸಿದಾಗ ಗಯೆಗೆ ಹೋದಲ್ಲಿ ತಾವು ಶ್ರೀಗದಾಧರವಿಷ್ಣುವಿನಲ್ಲಿ ಐಕ್ಯವಾಗಿಬಿಡುವೆವು ಮತ್ತು ತಮ್ಮ ಶರೀರ ಇನ್ನು ಇರಲಾರದು ಎಂದು ಹೇಳಿದರು. ಇದೇ ಕಾರಣದಿಂದ ಅವರು ಪುರಿಯ ಜಗನ್ನಾಥ ಕ್ಷೇತ್ರಕ್ಕೂ ಹೋಗಲಿಲ್ಲ. ಶ್ರೀದೇವೀಪುರಾಣದ ಪ್ರಕಾರ ಪುರಿಕ್ಷೇತ್ರದ ಜಗನ್ನಾಥ ಮತ್ತು ಗಯಾಕ್ಷೇತ್ರದ ಗದಾಧರವಿಷ್ಣು ಬೇರೆಯಲ್ಲ, ಒಂದೇ. (ಪುರೀ ಕ್ಷೇತ್ರೇ ಗದಾಧರಃ).ಆದ್ದರಿಂದ ತಾವೇ ಸ್ವತಃ ತಮ್ಮ ಧರ್ಮಪತ್ನಿ ಮತ್ತು ಅವರ ಅವತಾರಶಕ್ತಿಯಾದ ಶ್ರೀಶಾರದಾಮಾತೆಯವರಿಗೆ ತಾವು ಯಾವ ಕ್ಷೇತ್ರಗಳಿಗೆ ಹೋಗಲಿಲ್ಲವೋ ಆ ಎಲ್ಲಾ ಕ್ಷೇತ್ರಗಳಿಗೆ ಹೋಗಿ ಬರುವಂತೆ ಹೇಳಿದರು. ಅಂತೆಯೇ ಶ್ರೀಮಾತೆ ಭಾರತದಾದ್ಯಂತ ಇರುವ ಅನೇಕ ಪುಣ್ಯಕ್ಷೇತ್ರಗಳ ದರ್ಶನ ಮಾಡಿದರು. ಶ್ರೀ ಠಾಕೂರರು ತಾವು ತಮ್ಮ ಶರೀರದಲ್ಲಿದ್ದಾಗ ಶ್ರೀ ಜಗನ್ನಾಥನ ದರ್ಶನ ಮಾಡಲು ಹೋಗದ ಕಾರಣ ಶ್ರೀಮಾತೆ ಪುರಿಗೆ ಹೋದಾಗ ಅವರ ಒಂದು ಚಿತ್ರಪಟವನ್ನು ಶ್ರೀಜಗನ್ನಾಥನ ದರ್ಶನಕ್ಕೆ ಹೋಗುವಾಗ ತಮ್ಮ ಸೆರಗಿನ ಮರೆಯಲ್ಲಿಟ್ಟುಕೊಂಡು ಹೋಗಿ, ಜಗನ್ನಾಥನ ದರ್ಶನ ಮಾಡಿಸಿದರು.

ಶ್ರೀರಾಮಕೃಷ್ಣರು ಈ ಬೃಹತ್ ಕ್ಷೇತ್ರಗಳನ್ನಷ್ಟೇ ಅಲ್ಲದೆ ತಮ್ಮ ಸುತ್ತಲಿನ ಆನೂರು ವಿಶಾಲಾಕ್ಷಿ, ಮೃಣ್ಮಯಿ ದೇವಿ, ಸಿದ್ಧೇಶ್ವರಿ ಕಾಳಿ, ಶಾಂತಿನಾಥಶಿವ, ಶ್ಯಾಮಸುಂದರ ದೇವಸ್ಥಾನಗಳನ್ನು ಸಂದರ್ಶಿಸಿದರು. ಕಲ್ಕತ್ತೆಯಲ್ಲೇ ಇರುವ ಆದಿಗಂಗಾತಟದಲ್ಲಿರುವ ಕಾಳಿಘಾಟಿನ ಕಾಳೀಮಂದಿರ ಒಂದು ಶಕ್ತಿಪೀಠ. ಅಲ್ಲಿಗೂ ಶ್ರೀರಾಮಕೃಷ್ಣರು ಜಗನ್ಮಾತೆಯ ದರ್ಶನಾರ್ಥವಾಗಿ ಅನೇಕಬಾರಿ ಹೋಗಿದ್ದರು.

### ಉಪಸಂಹಾರ

ಭೂಮಿಯಲ್ಲಿ ಭಗವಂತನು ಅವತರಿಸಿ ಬಂದಾಗಲೆಲ್ಲಾ ಧರ್ಮಶಾಸ್ತ್ರವಿಹಿತ ಕರ್ತವ್ಯಗಳನ್ನು ಆಚರಿಸಿದ್ದಾರೆ. ಹಿಂದಿನ ಅವತಾರಗಳು ಸಹ ತೀರ್ಥಯಾತ್ರೆಯನ್ನು ಮಾಡಿ ಆಯಾ ಕ್ಷೇತ್ರದಲ್ಲಿ ವಿಹಿತವಾದ ಕರ್ಮಗಳನ್ನು ಆಚರಿಸಿರುವರು ಎಂಬುದು ನಮ್ಮ ಇತಿಹಾಸಗಳಿಂದ ತಿಳಿದುಬರುತ್ತದೆ. ಅಂತೆಯೇ ಶ್ರೀರಾಮಕೃಷ್ಣರು ಕಾಶಿ, ಪ್ರಯಾಗ, ವೃಂದಾವನ, ನವದ್ವೀಪ ಕ್ಷೇತ್ರಗಳಿಗೆ ಹೋಗುವುದರ ಮೂಲಕ ತಮ್ಮ ಅವತಾರ ಕಾರ್ಯವನ್ನು ಸಾಧಿಸಿದರು. ಅವತಾರಗಳು ನಡೆದ ಭೂಮಿಯೇ ಪಾವನ, ಇದ್ದ ಕ್ಷೇತ್ರವೇ ತೀರ್ಥ! ಹಾಗೆ ನೋಡಿದಾಗ ದಕ್ಷಿಣೇಶ್ವರ ಎಂಬ ಗಂಗಾತಟದ ಜಗನ್ಮಾತೆಯ ಕ್ಷೇತ್ರವನ್ನು ರಂಗಮಂಟಪವನ್ನಾಗಿ ಇರಿಸಿಕೊಂಡು ತಮ್ಮ ಇಡೀ ಅವತಾರದ ಲೀಲೆಯನ್ನಾಡಿದರು. ಶ್ರೀರಾಮಕೃಷ್ಣರು ಭೇಟಿಯಿತ್ತ ಜಾಗಗಳೆಲ್ಲಾ ಇಂದು ಪುಣ್ಯಕ್ಷೇತ್ರಗಳಾಗಿವೆ. ಅವರ ಅವತಾರ ಸ್ಥಳ ಮಹಾತೀರ್ಥವಾಗಿದೆ. ಅವರ ಆತ್ಮಾರಾಮವಿರುವ ಸ್ಥಾನ ಧರ್ಮಕ್ಷೇತ್ರವಾಗಿದೆ. ಹೀಗೆ ವರಪುಣ್ಯಮಯ ಗುರುವೂ, ಅವತಾರವೂ ಆಗಿರುವ ಶ್ರೀರಾಮಕೃಷ್ಣರು ತೀರ್ಥಕ್ಷೇತ್ರಗಳ ಸಂದರ್ಶನದ ಮೂಲಕ ಆಯಾ ಕ್ಷೇತ್ರಗಳ ಪಾವಿತ್ರ್ಯ ಮತ್ತು ಶಕ್ತಿಯನ್ನು ನೂರ್ಮಡಿಗೊಳಿಸಿದರು. ಶ್ರೀರಾಮಕೃಷ್ಣರ ತೀರ್ಥಯಾತ್ರೆ ಎಂಬ ಈ ಲೇಖನದ ಮೂಲಕ ನಾವೂ ಶ್ರೀರಾಮಕೃಷ್ಣರೊಡನೆ ಮಾನಸ ತೀರ್ಥಯಾತ್ರೆ ಮಾಡಿ, ಅದರ ಪುಣ್ಯಫಲವನ್ನು ಅಧ್ಯಾತ್ಮದ ಆನಂದವನ್ನು, ಮತ್ತು ಅವರ ಕೃಪೆಯನ್ನೂ ಪಡೆದು, ನಮ್ಮ ಜನ್ಮವನ್ನು ಸಫಲಗೊಳಿಸಿಕೊಳ್ಳೋಣ, ಮತ್ತು ಈ ಯಾತ್ರೆಯ ಸ್ಮರಣೆಗಳಿಂದ ನಮ್ಮ ಇಡಿಯ ಬದುಕನ್ನು ಭಗವನ್ಮಯವೂ, ಶ್ರೀಗುರುವಿಗೆ ಸಮರ್ಪಿತವೂ ಮಾಡಿಕೊಂಡು, ನಮ್ಮ ಆತ್ಮೋದ್ಧಾರಕ್ಕೆ ಹೇತುವಾಗಿಸಿಕೊಳ್ಳೋಣ! ಭಗವದನುರಾಗಿಗಳಾಗೋಣ!! ✽


*ಗ್ರಂಥಋಣ*

***Sri Ramakrishna - The Great Master***
*by Swami Saradananda*

***Journeys with Shree Ramakrishna*** –
*by Swami Prabhananda*